## ದುಡಿಯುತ್ತಿರುವ ಹದಿಹರೆಯದವರಿಂದ ಹಕ್ಕೊತ್ತಾಯ – ಭಾರತ

ರಾಷ್ಟ್ರೀಯ ಬಾಲ ಕಾರ್ಮಿಕರ ದಿನವಾದ ಏಪ್ರಿಲ್ 30 2021 ರ ಅಂಗವಾಗಿ
ರಾಜ್ಯ ಹಾಗು ಕೇಂದ್ರ ಸರ್ಕಾರದಿಂದ ಮಕ್ಕಳ ಸ್ನೇಹಿಯಾದ ಸಮಗ್ರ ಪ್ರತಿಕ್ರಿಯೆಯನ್ನು ಅಪೇಕ್ಷಿಸುತ್ತಿದ್ದೇವೆ
ದಿನಾಂಕ: 26.04.2021



**ದುಡಿಯುತ್ತಿರುವ ಹದಿಹರೆಯದವರಿಂದ ಹಕ್ಕೊತ್ತಾಯ – ಭಾರತ**

ರಾಷ್ಟ್ರೀಯ ಬಾಲ ಕಾರ್ಮಿಕರ ದಿನವಾದ ಏಪ್ರಿಲ್ 30 2021 ರ ಅಂಗವಾಗಿ
ರಾಜ್ಯ ಹಾಗು ಕೇಂದ್ರ ಸರ್ಕಾರದಿಂದ ಮಕ್ಕಳ ಸ್ನೇಹಿಯಾದ ಸಮಗ್ರ ಪ್ರತಿಕ್ರಿಯೆಯನ್ನು ಅಪೇಕ್ಷಿಸುತ್ತಿದ್ದೇವೆ
ದಿನಾಂಕ: 26.04.2021

---

**ದುಡಿಯುವ ಮಕ್ಕಳ ಸಂಘಗಳು / ಸಂಸ್ಥೆಗಳಾಗಿ, ದುಡಿಯುವ ಮಕ್ಕಳು ಮತ್ತು ಹದಿಹರೆಯದವರ ಅತ್ಯುತ್ತಮ ಹಿತಾಸಕ್ತಿಗಳನ್ನು ಎತ್ತಿ ಹಿಡಿಯಲು ಉದ್ದೇಶಿಸಿರುವ ಎಲ್ಲಾ ಕಾಯ್ದೆಗಳು, ನೀತಿಗಳು, ಮಾರ್ಗಸೂಚಿಗಳು ಮತ್ತು ಕಾರ್ಯಕ್ರಮಗಳು ನಮ್ಮ ಕಷ್ಟ ಮತ್ತು ವಿಭಿನ್ನವಾದ ವಾಸ್ತವಗಳಿಗೆ ಅನುಗುಣವಾಗಿ ನಮ್ಮ ಪರವಾಗಿರಬೇಕು ಮತ್ತು ಸೂಕ್ಷ್ಮವಾಗಿರಬೇಕು ಎಂದು ನಾವು ಒತ್ತಾಯಿಸುತ್ತೇವೆ. ನಮ್ಮ ಬದುಕಿನ ಮೇಲೆ ಪರಿಣಾಮ ಬೀರುವ ಎಲ್ಲ ವಿಷಯಗಳಲ್ಲೂ ನಮ್ಮನ್ನು ಕೇಳಿಸಿಕೊಳ್ಳಲೇಬೇಕು. ಎಲ್ಲಾ ಮಕ್ಕಳು ಮತ್ತು ಹದಿಹರೆಯದವರಂತೆ ನಾವೂ ಸಹ ಇಂದು ನಾಗರೀಕರು. ನಮ್ಮ ಈ ಕೆಳಕಂಡ ಶಿಫಾರಸ್ಸುಗಳನ್ನು ಸರ್ಕಾರವು ಗಮನಿಸಲೇಬೇಕು ಮತ್ತು ಅವುಗಳ ಬಗ್ಗೆ ತುರ್ತಾಗಿ ಮತ್ತು ಪ್ರಾಮಾಣಿಕವಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾವು ಒತ್ತಾಯಿಸುತ್ತೇವೆ**

**ಪರಿಚಯ:**

ಅಂತರರಾಷ್ಟ್ರೀಯ ಮಕ್ಕಳ ಹಕ್ಕುಗಳ ಒಡಂಬಡಿಕೆಯು ಜಾರಿಗೆ ಬಂದು 30 ವರ್ಷಗಳ ಆಚರಣೆಯ ಸಂದರ್ಭದಲ್ಲಿ ತಮ್ಮ ಹಕ್ಕುಗಳು, ತಮ್ಮ ಹಕ್ಕೊತ್ತಾಯ ಹಾಗು ಅವರ ಆಕಾಂಕ್ಷೆಗಳನ್ನು ವ್ಯಕ್ತಪಡಿಸಲು ನವೆಂಬರ್ 20, 2020 ರಂದು ಆನ್ ಲೈನ್ ಸಭೆಯ ಮೂಲಕ ನಮ್ಮ ದೇಶದ 8 ರಾಜ್ಯಗಳಿಂದ ದುಡಿಯುವ ಹದಿಹರೆಯದ ಹೆಣ್ಣು ಮಕ್ಕಳು ಹಾಗು ಗಂಡು ಮಕ್ಕಳು ಒಗ್ಗೂಡಿ ತಮ್ಮ ವಿಷಯಗಳನ್ನು ಚರ್ಚಿಸಿದ್ದಾರೆ.

**'ಮಕ್ಕಳು: ಬದಲಾವಣೆಯ ಹರಿಕಾರರು'** ಎಂಬ ಈ ರಾಷ್ಟ್ರ ಮಟ್ಟದ ಸಭೆಯಲ್ಲಿ ನವದೆಹಲಿ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಮಧ್ಯಪ್ರದೇಶ, ತಮಿಳುನಾಡು, ಗುಜರಾತ್, ರಾಜಸ್ಥಾನ ಹಾಗು ಕರ್ನಾಟಕ ರಾಜ್ಯಗಳ ದುಡಿಯುವ ಮಕ್ಕಳ ಹಾಗು ಹದಿಹರೆಯದವರ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕೋವಿಡ್ – 19 ಮತ್ತು ಅದರ ನಂತರದ ಪರಿಸ್ಥಿತಿಯಲ್ಲಿ ದುಡಿಯುತ್ತಿರುವ ಮಕ್ಕಳು ಹಾಗು ಹದಿಹರೆಯದವರ ಸಮಸ್ಯೆಗಳ ಕುರಿತು ಅವರು ಸುದೀರ್ಘವಾಗಿ ಚರ್ಚಿಸಿದ್ದಾರೆ. ತಮ್ಮ ಸಮಸ್ಯೆಗಳಿಗೆ ಅಗತ್ಯವಿರುವ ತುರ್ತಾದ ಗಮನ ಹಾಗು ಸೂಕ್ತ ಪ್ರತಿಕ್ರಿಯೆ ಸಿಗಲಿಲ್ಲವೆಂದು ಅವರು ಸ್ಪಷ್ಟವಾಗಿ ಸೂಚಿಸಿದ್ದಾರೆ. ಕೋವಿಡ್ – 19 ರ ಸಂದರ್ಭದಲ್ಲಿ ಪ್ರಸ್ತುತವಿರುವ ಅವರ ಹಾಗು ಅವರ ಸಮುದಾಯದ ಸಮಸ್ಯೆಗಳು ಹಾಗು ವ್ಯವಸ್ಥೆಯಲ್ಲಿನ ಬಿರುಕುಗಳು ಇನ್ನಷ್ಟು ಬಿಗಡಾಯಿಸಿರುವುದನ್ನು ಅವರು ಸಾಕಷ್ಟು ಒತ್ತನ್ನು ನೀಡಿ ವಿಷಯಗಳನ್ನು ಹಂಚಿಕೊಂಡಿದ್ದಾರೆ.

ಅವರ ಸಂಘಟನೆಗಳು ಹಾಗು ಮಕ್ಕಳ ಸಂಘಗಳ ಪರವಾಗಿ ಏಪ್ರಿಲ್ 30, 2021 ರಾಷ್ಟ್ರೀಯ ಬಾಲ ಕಾರ್ಮಿಕರ ದಿನದಂದು ಅವರ ಹಕ್ಕುಗಳು ಹಾಗು ಅರ್ಹತೆಗಳನ್ನು ಎತ್ತಿ ಹಿಡಿದಿದ್ದಾರೆ. ಏಪ್ರಿಲ್ 30, 2021 ರಂದು ರಾಷ್ಟ್ರೀಯ ಬಾಲ ಕಾರ್ಮಿಕರ ದಿನವೆಂದು ನಮ್ಮ ದೇಶದ ಮೊದಲನೆ ದುಡಿಯುವ ಮಕ್ಕಳ ಸಂಘಟನೆಯಾದ 'ಭೀಮ ಸಂಘ' 1990 ರಲ್ಲಿ ಗುರುತಿಸಿತು. ದುಡಿಯುವ ಮಕ್ಕಳು ಈ ಅರ್ಜಿಯಲ್ಲಿ ತಮ್ಮ ಹಕ್ಕೊತ್ತಾಯವನ್ನು ಮತ್ತು ಶಿಫಾರಸುಗಳನ್ನು ಸರ್ಕಾರ ಹಾಗು ಸಂಬಂಧಪಟ್ಟ ಉತ್ತರದಾಯಿಗಳಿಗೆ ಈ ಮೂಲಕ ಮಂಡಿಸುತ್ತಾರೆ.

**ಹಕ್ಕೊತ್ತಾಯ:**

*ದುಡಿಯುವ ಮಕ್ಕಳ ಸಂಘಗಳು / ಸಂಸ್ಥೆಗಳಾಗಿ, ದುಡಿಯುವ ಮಕ್ಕಳು ಮತ್ತು ಹದಿಹರೆಯದವರ ಅತ್ಯುತ್ತಮ ಹಿತಾಸಕ್ತಿಗಳನ್ನು ಎತ್ತಿ ಹಿಡಿಯಲು ಉದ್ದೇಶಿಸಿರುವ ಎಲ್ಲಾ ಕಾಯ್ದೆಗಳು, ನೀತಿಗಳು, ಮಾರ್ಗಸೂಚಿಗಳು ಮತ್ತು ಕಾರ್ಯಕ್ರಮಗಳು ನಮ್ಮ ಕಷ್ಟ ಮತ್ತು ವಿಭಿನ್ನವಾದ ವಾಸ್ತವಗಳಿಗೆ ಅನುಗುಣವಾಗಿ ನಮ್ಮ ಪರವಾಗಿರಬೇಕು ಮತ್ತು ಸೂಕ್ಷ್ಮವಾಗಿರಬೇಕು ಎಂದು ನಾವು ಒತ್ತಾಯಿಸುತ್ತೇವೆ. ನಮ್ಮ ಬದುಕಿನ ಮೇಲೆ ಪರಿಣಾಮ ಬೀರುವ ಎಲ್ಲ ವಿಷಯಗಳಲ್ಲೂ ನಮ್ಮನ್ನು ಕೇಳಿಸಿಕೊಳ್ಳಲೇಬೇಕು. ಎಲ್ಲಾ ಮಕ್ಕಳು ಮತ್ತು ಹದಿಹರೆಯದವರಂತೆ ನಾವೂ ಸಹ ಇಂದು ನಾಗರೀಕರು. ನಮ್ಮ ಈ ಕೆಳಕಂಡ ಶಿಫಾರಸ್ಸುಗಳನ್ನು ಸರ್ಕಾರವು ಗಮನಿಸಲೇಬೇಕು ಮತ್ತು ಅವುಗಳ ಬಗ್ಗೆ ತುರ್ತಾಗಿ ಮತ್ತು ಪ್ರಾಮಾಣಿಕವಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾವು ಒತ್ತಾಯಿಸುತ್ತೇವೆ*

**ದುಡಿಯುತ್ತಿರುವ ಹದಿಹರೆಯದವರಿಂದ ಹಕ್ಕೊತ್ತಾಯ – ಭಾರತ**

<u>ರಾಷ್ಟ್ರೀಯ ಬಾಲ ಕಾರ್ಮಿಕರ ದಿನವಾದ ಏಪ್ರಿಲ್ 30 2021 ರ ಅಂಗವಾಗಿ</u>
<u>ರಾಜ್ಯ ಹಾಗು ಕೇಂದ್ರ ಸರ್ಕಾರದಿಂದ ಮಕ್ಕಳ ಸ್ನೇಹಿಯಾದ ಸಮಗ್ರ ಪ್ರತಿಕ್ರಿಯೆಯನ್ನು ಅಪೇಕ್ಷಿಸುತ್ತಿದ್ದೇವೆ</u>
ದಿನಾಂಕ: 26.04.2021

---

**ಕೋವಿಡ್ – 19 ಬಿಕ್ಕಟ್ಟು ಪರಿಸ್ಥಿತಿಯಲ್ಲಿ ಬದುಕುಳಿಯುವುದು:**

- ಮಕ್ಕಳು ಆಸ್ಪತ್ರೆಗಳಿಗೆ ಹೋಗಲು ಹೆದರುತ್ತಿದ್ದೇವೆ. ನಮ್ಮ ಮನೆಯಲ್ಲಿ ಅನೇಕ ಜನರಿದ್ದಾರೆ ಮತ್ತು ನಮ್ಮ ಮನೆಯೊಳಗೆ ಸುರಕ್ಷಿತ ಅಂತರವನ್ನು ಕಾಪಾಡಿಕೊಳ್ಳಲು ನಮಗೆ ಕಷ್ಟಸಾಧ್ಯ. ನಾವು ಆಸ್ಪತ್ರೆಗಳಿಗೆ ಹೋದರೆ, ನಮ್ಮ ಮನೆಗಳನ್ನು ಯಾರು ನೋಡಿಕೊಳ್ಳುತ್ತಾರೆ ಎಂಬ ಆತಂಕವೂ ನಮಗಿದೆ. ನಮಗೆ ತುರ್ತಾಗಿ ಬೆಂಬಲ ಬೇಕು
- ನಮ್ಮ ನಗರಗಳಲ್ಲಿ, ಕೋವಿಡ್ – 19 ರ ಎರಡನೇ ಅಲೆಯ ಸಂದರ್ಭದಲ್ಲಿ ನಾವು ಈಗಾಗಲೇ ಮೂರನೇ ವಾರದಲ್ಲಿದ್ದೇವೆ. ಪೋಷಕರು ಅಥವಾ ಮಕ್ಕಳು ದುಡಿದು ಹಣವನ್ನು ಸಂಪಾದಿಸಲು ಸಾಧ್ಯವಾಗುತ್ತಿಲ್ಲ. ನಮಗೆ ಉಚಿತ ಪಡಿತರ ಮತ್ತು ಆಹಾರ ಪ್ಯಾಕೆಟ್‌ಗಳನ್ನು ವಿತರಿಸಬೇಕು. ಕಳೆದ ಕೋವಿಡ್ – 19 ಮೊದಲನೆಯ ಅಲೆಯ ಸಂದರ್ಭದಲ್ಲಿ ನೀಡಲಾದ ದಿನಸಿ ಪದಾರ್ಥಗಳ ಪ್ರಮಾಣವು ಸಾಕಾಗಲಿಲ್ಲ. ಅವುಗಳನ್ನು ಸಮರ್ಪಕವಾಗಿ ನೀಡಬೇಕು ಮತ್ತು ನೀಡಲಾಗುವ ಆಹಾರ ಧಾನ್ಯಗಳು ನಮ್ಮ ಪ್ರದೇಶ ಮತ್ತು ಆಹಾರ ಪದ್ಧತಿಗಳಿಗೆ ಸೂಕ್ತವಾಗಿರಬೇಕು. ಈ ಸಾಂಕ್ರಾಮಿಕ ಸಮಯದಲ್ಲಿ ನಾವು ಹೊರಹೋಗಲು ಸಾಧ್ಯವಿಲ್ಲದ ಕಾರಣ ಈ ಪಡಿತರ ಮತ್ತು ಔಷಧಿಗಳನ್ನು ಮನೆಗೆ ತಲುಪಿಸಬೇಕು
- ಎಲ್ಲಾ ನಾಗರಿಕರಿಗೆ ಉಚಿತ ಲಸಿಕೆ (ಎರಡೂ ಬಾರಿ) ನೀಡಬೇಕು. ಏಕೆಂದರೆ ಅದು ನಮ್ಮ ಹಕ್ಕು. ಪ್ರತಿ ಹಳ್ಳಿಯಲ್ಲಿ ಪೋಲಿಯೊ ಲಸಿಕೆಗಳನ್ನು ನೀಡಿದಂತೆಯೇ, ನಮ್ಮ ಜೀವಗಳನ್ನು, ನಮ್ಮ ಕುಟುಂಬದ ಸದಸ್ಯರು ಮತ್ತು ನಮ್ಮ ಸಮುದಾಯಗಳನ್ನು ರಕ್ಷಿಸಲು ಕೋವಿಡ್ – 19 ಲಸಿಕೆಗಳನ್ನು ಪ್ರತಿಯೊಬ್ಬರಿಗೂ ಉಚಿತವಾಗಿ ನೀಡಬೇಕು
- 18 ವರ್ಷಕ್ಕಿಂತ ಕಡಿಮೆ ಇರುವ ನಮಗೆಲ್ಲರಿಗೂ ಕೋವಿಡ್ – 19 ರಿಂದ ರಕ್ಷಣೆ ಪಡೆದುಕೊಳ್ಳುವುದಕ್ಕೆ ವೈದ್ಯಕೀಯ ಕಿಟ್‌ಗಳನ್ನು ನೀಡಬೇಕು. ಅವುಗಳಲ್ಲಿ ಹಣ್ಣುಗಳು, ವಿಟಮಿನ್ಸ್, ಕಬ್ಬಿಣದ ಅಂಶವನ್ನು ಹೆಚ್ಚಿಸುವ ಮಾತ್ರೆಗಳು ಮತ್ತು ಇತರ ಪೂರಕಗಳು, ಆಯುರ್ವೇದ / ನೈಸರ್ಗಿಕ ಔಷಧಿಗಳು, ಕೋವಿಡ್ – 19 ಮತ್ತು ಕೋವಿಡ್ – 19 ತಡೆಗಟ್ಟಲು ಆರೈಕೆಯನ್ನು ಹೇಗೆ ಮಾಡಬಹುದು ಎಂಬುದರ ಮಾರ್ಗಸೂಚಿಗಳು ಇರಬೇಕು
- ಮಾಸ್ಕನ್ನು ಧರಿಸದ ಕಾರಣ ಮಕ್ಕಳು ಮತ್ತು ಹದಿಹರೆಯದವರೊಂದಿಗೆ ಒರಟಾಗಿ ವರ್ತಿಸುವ ಬದಲು, ಮಾಸ್ಕನ್ನು ಧರಿಸಿಲ್ಲದವರಿಗೆ ಪೊಲೀಸರು ಅದನ್ನು ನೀಡಬೇಕು. ನಮ್ಮ ಕೆಲವು ಸ್ನೇಹಿತರಿಗೆ ಮಾಸ್ಕ್ ಇರಲಿಲ್ಲ ಮತ್ತು ಮಾಸ್ಕನ್ನು ನೀಡುವ ಬದಲು ಅವರನ್ನು ಅವಮಾನಿಸಲಾಯಿತು
- ನಮ್ಮ ರಾಜ್ಯಗಳಲ್ಲಿ ಒಂದಾದ ಪಶ್ಚಿಮ ಬಂಗಾಳದಲ್ಲಿ, ಚುನಾವಣಾ ಸಾಮೂಹಿಕ ಸಭೆ–ಸಮಾರಂಭಗಳು ಹಾಗು ರ‍್ಯಾಲಿಗಳಲ್ಲಿ ಸಾವಿರಾರು ಜನರು ಒಗ್ಗೂಡುತ್ತಿದ್ದರು. ಪ್ರಸ್ತುತ ಸಂದರ್ಭಗಳಲ್ಲಿ ಅಂತಹ ಸಾರ್ವಜನಿಕ ಸಭೆಗಳು ಭವಿಷ್ಯದಲ್ಲಿಯೂ ಸಹ ನಡೆಯಲು ಅನುಮತಿಸಬಾರದು, ಏಕೆಂದರೆ ಅವು ತುಂಬಾ ಅಪಾಯಕಾರಿ. ಚುನಾವಣೆಗಳು ನಡೆಯಬೇಕಾದರೆ, ಅವರು ಮೊಬೈಲ್ ಅಥವಾ ಇಂಟರ್ನೆಟ್ ಬಳಸಿ ಮತದಾನ ಮಾಡಬಹುದಾದಂತಹ ವಿಧಾನಗಳನ್ನು ಬಳಸಬಹುದು. ಇದರಿಂದ ಜನರ ದೊಡ್ಡ ಕೂಟಗಳನ್ನು ನಿಷೇಧಿಸಲು ಸುಲಭವಾಗುತ್ತದೆ
- ಕೋವಿಡ್ – 19 ನಮ್ಮ ಶಿಕ್ಷಣದ ಮೇಲೆ ತುಂಬಾ ಕೆಟ್ಟ ಪರಿಣಾಮ ಬೀರಿದೆ. ಜೂಮ್ ಆಪ್ ಮತ್ತು ಆನ್‌ಲೈನ್‌ನಲ್ಲಿ ಕಲಿಯುವುದು ತುಂಬಾ ಕಷ್ಟ. ನಮಗೆ ಸ್ಮಾರ್ಟ್ ಫೋನ್‌ಗಳನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ ಮತ್ತು ನಮ್ಮಲ್ಲಿ ಅನೇಕರಿಗೆ ಫೋನ್‌ಗೆ ವ್ಯವಸ್ಥೆ ಮಾಡಿಕೊಂಡರೂ ಸಹ ಇಂಟರ್ನೆಟ್ ಸೌಲಭ್ಯಗಳಿಲ್ಲ – ಇದಕ್ಕಾಗಿ ನಮಗೆ ಸರ್ಕಾರದಿಂದ ಸಬ್ಸಿಡಿ ಸಿಗಬೇಕು. ಫೋನ್ ಮತ್ತು ಇಂಟರ್ನೆಟ್ ಎರಡನ್ನೂ ಹೊಂದಿಸಿಕೊಂಡರೂ, ಪಾಠಗಳನ್ನು ಕಲಿಸುವ ವಿಧಾನ, ಅವುಗಳನ್ನು ಗ್ರಹಿಸುವುದು ಅಸಾಧ್ಯವಾಗಿದೆ. ನಮ್ಮೆಲ್ಲರಿಗೂ (ಶೈಶವ್, ಗುಜರಾತ್ ಮಾದರಿ) ಸುಲಭವಾದ ಕಲಿಕೆಗೆ ಲಭ್ಯವಿರುವ ಶೈಕ್ಷಣಿಕ ಕಿಟ್‌ಗಳನ್ನು ನಾವು ಶಿಫಾರಸು ಮಾಡುತ್ತೇವೆ ಮತ್ತು ಸಮುದಾಯದಲ್ಲಿ ಸಣ್ಣ ಗುಂಪುಗಳಲ್ಲಿ ಬೋಧನೆಯನ್ನು (ವಿದ್ಯಾಗಮ, ಕರ್ನಾಟಕ ರಾಜ್ಯ ಮಾದರಿಯಂತೆ) ಹೊಂದುವುದು ಮುಂದಿನ ತರಗತಿಗಳಿಗೆ ಹೋಗಲು ಬೇಕಾದ ಅಗತ್ಯ ಮಾಹಿತಿಗಳನ್ನು ಎಲ್ಲಾ ಮಕ್ಕಳು ಕಲಿಯಲು ಸಾಧ್ಯವಾಗುತ್ತದೆ
- ಸತತವಾಗಿ ಎರಡು ವರ್ಷಗಳಿಂದ ಎಲ್ಲಾ ಮಕ್ಕಳನ್ನೂ ಯಾವುದೇ ಸೂಕ್ತ ಜ್ಞಾನ ಅಥವಾ ಕೌಶಲ್ಯಗಳನ್ನು ನೀಡದೆ ಮುಂದಿನ ತರಗತಿಗಳಿಗೆ ತೇರ್ಗಡೆಗೊಳಿಸುತ್ತಿದ್ದಾರೆ. ಇದು ನಮಗೆ ಹೆಚ್ಚಿನ ಶಿಕ್ಷಣಕ್ಕೆ ಅನರ್ಹರನ್ನಾಗಿ ಮಾಡುತ್ತದೆ ಹಾಗು ಉದ್ಯೋಗಕ್ಕೆ

ಸಂದರ್ಶನಗಳನ್ನು ತೆಗೆದುಕೊಳ್ಳಲು ನಮಗೆ ಸಾಮರ್ಥ್ಯವಿರುವುದಿಲ್ಲ. ಬದಲಾಗಿ ಸರ್ಕಾರವು ಈ ಅವಧಿಯನ್ನು ಶೂನ್ಯ ವರ್ಷವೆಂದು ಘೋಷಿಸಬೇಕು ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಕೆಲವು ಕೌಶಲ್ಯ ಮತ್ತು ಬೋಧನೆಯನ್ನು ನೀಡಲು ಬಳಸಬೇಕು. ಈ ಬಿಕ್ಕಟ್ಟು ಪರಿಸ್ಥಿತಿ ಕಳೆದ ನಂತರ, ಅದೇ ತರಗತಿಗಳನ್ನು ಬೋಧನೆ ಮತ್ತು ಕಲಿಕೆಯೊಂದಿಗೆ ಪುನರಾವರ್ತಿಸಲು ನಮಗೆ ಅವಕಾಶ ನೀಡಬೇಕು

- ಲಾಕ್‌ಡೌನ್ ಕಾರಣ, ನಾವು ಮತ್ತು ನಮ್ಮ ಕುಟುಂಬಗಳು ಕೆಲಸಕ್ಕೆ ಹೋಗಲು ಸಾಧ್ಯವಾಗುವುದಿಲ್ಲ, ಆದ್ದರಿಂದ ನಮಗೆ ಸೇವಿಸಲು ಸಾಕಷ್ಟು ಆಹಾರ ಅಥವಾ ಮನೆ ಬಾಡಿಗೆ ಪಾವತಿಸಲು ಹಣವಿಲ್ಲ. ಈ ಸಮಸ್ಯೆ ಇರುವವರೆಗೂ ನಾವು ಬಾಡಿಗೆಯಿಂದ ವಿನಾಯಿತಿ ಪಡೆಯಬೇಕು. ಆಗ ಮಾತ್ರ ನಮ್ಮ ತಲೆಯ ಮೇಲಿರುವ ಸೂರನ್ನು ನಮ್ಮಿಂದ ಕಿತ್ತುಕೊಳ್ಳುವ ನಿರಂತರ ಭಯದಿಂದ ನಾವು ಪಾರಾಗಲು ಸಾಧ್ಯವಾಗುತ್ತದೆ

**ಎಲ್ಲಾ ಮಕ್ಕಳಿಗೆ ರಕ್ಷಣೆ:**

- ನಾವು ಯಾವುದೇ ದೈಹಿಕ, ಮಾನಸಿಕ ಅಥವಾ ಭಾವನಾತ್ಮಕ ಹಿಂಸೆ ಅಥವಾ ಕಿರುಕುಳಕ್ಕೆ ಒಳಗಾಗದಂತೆ ಎಲ್ಲಾ ಮಕ್ಕಳು ಮತ್ತು ಹದಿಹರೆಯದವರಿಗೆ ರಕ್ಷಣೆ ನೀಡಬೇಕು
- ನಾವು, ದುಡಿಯುವ ಮಕ್ಕಳು ಮತ್ತು ಹದಿಹರೆಯದವರಿಗೆ ನಮ್ಮ ನಿಜ ಸ್ಥಿತಿ, ನಮ್ಮ ಹಿನ್ನೆಲೆ ಮತ್ತು ನಾವು ದುಡಿಯುವ ಕಾರಣಕ್ಕಾಗಿ ದಂಡ ಮತ್ತು ಶಿಕ್ಷೆ ವಿಧಿಸಲಾಗುತ್ತಿದೆ. ನಾವು ಬದುಕನ್ನು ನಡೆಸಲು ಮತ್ತು ನಮ್ಮ ಕುಟುಂಬಗಳನ್ನು ಬೆಂಬಲಿಸಲು ನಾವು ದುಡಿಯಲೇಬೇಕಾದ ಪರಿಸ್ಥಿತಿ ಇದೆ. ನಮಗೆ ದಂಡ ವಿಧಿಸುವ ಕಾನೂನುಗಳನ್ನು ಜಾರಿಗೆ ತರಬಾರದು
- ನಮ್ಮಲ್ಲಿ ಅನೇಕರು ವಿವಿಧ ರೀತಿಯ ದೌರ್ಜನ್ಯವನ್ನು ಅನುಭವಿಸುತ್ತಿರುವುದರಿಂದ ಬೀದಿಗಳಲ್ಲಿ ವಾಸಿಸುವ ಹಾಗು ದುಡಿಯಲು ಹೋಗುವ ನಮಗೆ ರಕ್ಷಣೆ ಮತ್ತು ಸುರಕ್ಷತೆಯನ್ನು ಎಲ್ಲಾ ಸಮಯದಲ್ಲೂ ಖಚಿತಪಡಿಸಬೇಕು
- ಮಕ್ಕಳನ್ನು ಮಾರಾಟ ಮಾಡುವ ಹಾಗು ಶೋಷಣೆಗೆ ಒಳಪಡಿಸುವ ಜನರು ಮತ್ತು ಖಾಸಗಿ ಸಂಸ್ಥೆಗಳನ್ನು ಸರ್ಕಾರವು ಕಂಡು ಹಿಡಿಯಬೇಕು. ಅಂತಹ ಸಂಸ್ಥೆಗಳಿಗೆ ನಮಗೆ ರಕ್ಷಣೆ ನೀಡುವ ಜವಾಬ್ದಾರಿಯನ್ನು ನೀಡಬಾರದು
- ಶಾಲೆಗಳಲ್ಲಿ ಮತ್ತು ಸಮುದಾಯದಲ್ಲಿ ಮಕ್ಕಳ ಹಕ್ಕುಗಳು ಹಾಗು ಅವುಗಳನ್ನು ಗೌರವಿಸುವುದು ಎಂಬ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು

**ಹದಿಹರೆಯದವರಿಗೆ ಸುರಕ್ಷಿತವಾದ ಕೆಲಸಗಳು:**

- ಹದಿಹರೆಯದವರಿಗೆ ಸುರಕ್ಷಿತ ಉದ್ಯೋಗದಲ್ಲಿ ಕೆಲಸ ಮಾಡಲು ಕಾನೂನು ಅನುಮತಿಯನ್ನು ನೀಡುತ್ತದೆ. ನಾವು ಕೆಲಸ ಮಾಡಲು ಇಚ್ಛಿಸಿದಲ್ಲಿ ಅಥವಾ ಆಯ್ಕೆ ಮಾಡಿಕೊಂಡಲ್ಲಿ, ಹುಡುಗರು, ಹುಡುಗಿಯರು ಮತ್ತು ಇತರ ಲಿಂಗಗಳ ಮಕ್ಕಳಿಗೆ ತಮ್ಮ ಉದ್ಯೋಗದ ಸ್ಥಳವನ್ನು ಸುರಕ್ಷಿತವಾಗಿಸಬೇಕು. ನಮ್ಮ ಕೆಲಸದ ಸ್ಥಳಗಳಲ್ಲಿ ನಮಗೆ ಎಲ್ಲಾ ರೀತಿಯ ಶೋಷಣೆ ಮತ್ತು ನಿಂದನೆಯಿಂದ ರಕ್ಷಣೆ ಸಿಗಬೇಕು
- ನಾವು ದುಡಿಯುವ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಯಾವುದೇ ಶಾಲಾ ಶಿಕ್ಷಣ ಅಥವಾ ಔಪಚಾರಿಕ ಶಿಕ್ಷಣವನ್ನು ಪಡೆಯದ ಹದಿಹರೆಯದವರಿಗೆ ಸರ್ಕಾರವು ಸುರಕ್ಷಿತ ಉದ್ಯೋಗವನ್ನು ಒದಗಿಸಬೇಕು
- ಹದಿಹರೆಯದವರು ಮಾಡುವ ಕೆಲಸವು ಅಪಾಯಕಾರಿಯಾಗಬಾರದು – ಉದಾಹರಣೆಗೆ ಪಟಾಕಿ ತಯಾರಿಕೆ, ಗಣಿಗಾರಿಕೆ, ಮದ್ಯ ಮತ್ತು ಮಾದಕ ವಸ್ತುಗಳು ಹಾಗು ದ್ರವ್ಯಗಳ ತಯಾರಿಕೆ ಯಂತಹ ಅಪಾಯಕಾರಿ ಕೆಲಸಗಳನ್ನು ನಮಗೆ ನೀಡಬಾರದು. ಇದನ್ನು ನಾವು ಒಪ್ಪುವುದಿಲ್ಲ. ತಡರಾತ್ರಿಯವರೆಗೆ ದುಡಿಯುವ ಪರಿಸ್ಥಿತಿಯಿರುವ ಉದ್ಯೋಗಗಳಲ್ಲಿ ಹದಿಹರೆಯದವರ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಕಟ್ಟುನಿಟ್ಟಾದ ಮಾರ್ಗಸೂಚಿಗಳನ್ನು ಜಾರಿಗೊಳಿಸಬೇಕು
- ಹದಿಹರೆಯದವರಿಗೆ ಸುರಕ್ಷಿತ ಉದ್ಯೋಗಗಳಲ್ಲಿ ಮಾತ್ರ ಕೆಲಸ ಮಾಡಲು ಅವಕಾಶವಿದ್ದರೂ, ಸುರಕ್ಷಿತ ಉದ್ಯೋಗಗಳ ಕೊರತೆ ಇರುವುದರಿಂದ, ನಮ್ಮಲ್ಲಿ ಹಲವರು ಅಪಾಯಕಾರಿ ಕೆಲಸವನ್ನು ಮಾಡಲೇಬೇಕಾದ ಅನಿವಾರ್ಯತೆ ಇದೆ. ಹದಿಹರೆಯದವರು

ಸುರಕ್ಷಿತ ಕೆಲಸದಲ್ಲಿ ಕೆಲಸ ಮಾಡುವುದನ್ನು ಸರ್ಕಾರ ಖಚಿತಪಡಿಸಬೇಕು. ಅದಕ್ಕಾಗಿ ನಮಗೆ ಸುರಕ್ಷಿತ ಕೆಲಸದ ಅವಕಾಶಗಳನ್ನು ಸೃಷ್ಟಿಸುವ ತುರ್ತು ಅಗತ್ಯವಿದೆ

- ನಮ್ಮ ಆತ್ಮವಿಶ್ವಾಸವನ್ನು ಹಾಗು ನಮ್ಮ ಬೆಳವಣಿಗೆಯನ್ನು ಹೆಚ್ಚಿಸುವ ಉದ್ಯೋಗ ಅವಕಾಶಗಳು ನಮಗೆ ಒದಗಿಸಬೇಕು. ಸುರಕ್ಷಿತ ದುಡಿಯುವ ಸ್ಥಳಗಳಲ್ಲಿ ಹೊಲಿಗೆ, ವಿದ್ಯುತ್ ಕೆಲಸ, ಮರಗೆಲಸ ಇತ್ಯಾದಿಗಳ ಉತ್ತಮ ತರಬೇತಿಯನ್ನು ನೀಡುವುದರಿಂದ ಬಹಳ ಸಹಾಯಕವಾಗುತ್ತದೆ
- ಪ್ರಸ್ತುತ ಪರಿಸ್ಥಿತಿಯಲ್ಲಿ ಅನೇಕ ಹದಿಹರೆಯದವರು, ವಿಶೇಷವಾಗಿ ಹುಡುಗಿಯರು ಸುರಕ್ಷತೆಯಿಲ್ಲದ ಸ್ಥಳಗಳಲ್ಲಿ ಕೆಲಸ ಮಾಡುತ್ತಾರೆ. ನಾವು ಔಪಚಾರಿಕ ಕೆಲಸದ ಸ್ಥಳದಲ್ಲಿ ಕೆಲಸ ಮಾಡದಿದ್ದಲ್ಲಿ, ನಮ್ಮ ಸುರಕ್ಷತೆಯ ಮೇಲ್ವಿಚಾರಣೆ ಮಾಡುವುದು ಕಷ್ಟವಾಗಬಹುದು. ಅಂತಹ ಸಂದರ್ಭಗಳಲ್ಲಿ, ಚೈಲ್ಡ್‌ಲೈನ್‌ನಂತಹ ಸಂಸ್ಥೆಗಳು ನಮ್ಮ ದುಡಿಮೆಯ ಸ್ಥಳವನ್ನು ಪರಿಶೀಲಿಸಬೇಕು ಮತ್ತು ರಕ್ಷಣೆಯಲ್ಲಿನ ಯಾವುದೇ ಲೋಪದೋಷಗಳನ್ನು ಎಚ್ಚರಿಸಬೇಕು. ನಮ್ಮನ್ನು ತಕ್ಷಣ ರಕ್ಷಿಸಬೇಕು. ಕೆಲಸದ ಸ್ಥಳದಲ್ಲಿ ಹುಡುಗಿಯರ ರಕ್ಷಣೆ ಬಹಳ ಮುಖ್ಯ. ನಮ್ಮನ್ನು ಗೌರವಿಸಲೇಬೇಕು
- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯಡಿ (ನರೇಗ), 16–18 ವರ್ಷದೊಳಗಿನ ಹದಿಹರೆಯದವರಿಗೆ ನಮಗೆ ಸುರಕ್ಷಿತ ಉದ್ಯೋಗಾವಕಾಶಗಳು ಇರಬೇಕು. ಉದಾಹರಣೆಗೆ, ನಾವು ತರಕಾರಿಗಳನ್ನು ಬೆಳೆಸಬಹುದು, ನಮ್ಮ ವಯಸ್ಸು ಹಾಗು ಸಾಮರ್ಥ್ಯಗಳಿಗೆ ಸೂಕ್ತವಾದ ಕೃಷಿ ಮತ್ತು ಇತರ ಚಟುವಟಿಕೆಗಳಲ್ಲಿ ಭಾಗವಹಿಸಬಹುದು. ಪಂಚಾಯಿತಿಗಳು ಮತ್ತು ಸಮುದಾಯದ ಸದಸ್ಯರ ಮೇಲ್ವಿಚಾರಣೆಯ ಅಡಿಯಲ್ಲಿ ನರೇಗ ಕಾರ್ಯಕ್ರಮವು ಹಳ್ಳಿಗಳಲ್ಲಿ ನಡೆಯುವುದರಿಂದ ನಮ್ಮ ಸುರಕ್ಷತೆಯನ್ನು ಖಾತ್ರಿಪಡಿಸುವುದು ಗ್ರಾಮ ಪಂಚಾಯತ್‌ಗೆ ಸಾಧ್ಯವಾಗುತ್ತದೆ. ಶಾಲೆಯಿಂದ ಹೊರಗುಳಿಯುವ ಸಂದರ್ಭವಿರುವ ನಮ್ಮಲ್ಲಿ ಅನೇಕರಿಗೆ ಇದು ಉಪಯುಕ್ತವಾಗುತ್ತದೆ ಮತ್ತು ನಮ್ಮ ಶಾಲಾ ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗುತ್ತದೆ
- ಕೋವಿಡ್ – 19 ರಂತಹ ಸಮಸ್ಯೆಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ನಮ್ಮ ಉದ್ಯೋಗದಾತರಿಂದ ಹಣವನ್ನು ಸಾಲ ಪಡೆಯುವ ಮತ್ತು ಸಾಲ ಮರುಪಾವತಿಗೆ ಬದಲಾಗಿ ಕೆಲಸ ಮಾಡುವಂತಹ ವ್ಯವಸ್ಥೆ ಇರಬೇಕು. ನಾವು ಬೇರೆಡೆ ಸಾಲ ಪಡೆಯಲು ಸಾಧ್ಯವಿಲ್ಲದ ಕಾರಣ ಇದು ಅವಶ್ಯಕವಾಗಿದೆ
- ಸಾಲ ತೆಗೆದುಕೊಳ್ಳುವ ಸೌಲಭ್ಯಗಳನ್ನು ನಮಗೆ ನೀಡಬೇಕು ಮತ್ತು ಮಾಸಿಕ ಕಂತುಗಳನ್ನು ನಮ್ಮ ಸಂಬಳದಿಂದ ಕಡಿತಗೊಳಿಸಬಹುದು. ಸರ್ಕಾರ ನಮಗೆ ಇಎಂಐ ಸೌಲಭ್ಯಗಳನ್ನು ಒದಗಿಸಬೇಕು. ಆ ಮೂಲಕ ನಾವು ಹಣವನ್ನು ಸಮರ್ಪಕವಾಗಿ ನಿರ್ವಹಿಸಬಹುದು. ಬ್ಯಾಂಕ್ ಖಾತೆಗಳು ಮತ್ತು ಹಣ ನಿರ್ವಹಣೆಯ ಕುರಿತು ಅವರು ನಮಗೆ ಸಲಹೆ ನೀಡಬೇಕು
- ನಮ್ಮಲ್ಲಿ ಸ್ವಂತ ಉದ್ಯೋಗವನ್ನು ಪ್ರಾರಂಭಿಸಲು ಬಯಸುವವರಿಗೆ ಸರ್ಕಾರವು ಕಡಿಮೆ ಬಡ್ಡಿ ಸಾಲವನ್ನು ನೀಡಬೇಕು ಮತ್ತು ವ್ಯವಹಾರವನ್ನು ಹೇಗೆ ಉತ್ತಮವಾಗಿ ನಡೆಸಬೇಕು ಎಂಬುದರ ಕುರಿತು ನಮಗೆ ಮಾರ್ಗದರ್ಶನ ನೀಡಬೇಕು
- ನಮ್ಮ ಕೌಶಲ್ಯಗಳಿಗೆ ಅನುಗುಣವಾಗಿ ಹದಿಹರೆಯದವರಿಗೆ ಕೆಲಸವನ್ನು ನೀಡಬೇಕು. ಉದಾಹರಣೆಗೆ, ನಾವು ಸ್ವಲ್ಪ ಮಟ್ಟಿಗೆ ಗ್ಯಾರೇಜ್ ಕೆಲಸವನ್ನು ಕಲಿತಿದ್ದರೆ ನಮಗೆ ಹೆಚ್ಚಿನ ತರಬೇತಿ ಹಾಗು ಕೆಲಸ ಮಾಡಲು ಅವಕಾಶಗಳು ದೊರೆಯುವುದರಿಂದ ನಮಗೆ ಹೆಚ್ಚಿನ ಕೌಶಲ್ಯಗಳು ಮತ್ತು ಉತ್ತಮ ವೇತನ ಸಿಗುತ್ತದೆ
- ನಮ್ಮ ಕೆಲಸದ ಸ್ಥಳದಲ್ಲಿ ಶೌಚಾಲಯದ ಸೌಲಭ್ಯ ಇರಬೇಕು. ನಾವು ಶೌಚಾಲಯ ವಿರಾಮಗಳನ್ನು ತೆಗೆದುಕೊಂಡಾಗ ಮಾಲೀಕರು ನಮಗೆ ಬೆದರಿಕೆ ಹಾಕುವಂತಿಲ್ಲ
- ನಮ್ಮಲ್ಲಿ ಸಾರ್ವಜನಿಕ ಸಾರಿಗೆಯನ್ನು ಬಳಸುವವರಿಗೆ, ನಮ್ಮ ಟಿಕೆಟ್‌ಗಳನ್ನು ವಿದ್ಯಾರ್ಥಿಗಳಿಗೆ ನೀಡಿದಂತೆ ಡಿಕೆಡ್ ಹಣದ ಮೇಲೆ ರಿಯಾಯಿತಿ ನೀಡಬೇಕು
- ನಮ್ಮ ಕೆಲಸದ ಸಮಯ ದೀರ್ಘವಾಗಿದ್ದರೆ ನಮಗೆ ಸಾರಿಗೆ ವ್ಯವಸ್ಥೆಯನ್ನು ಒದಗಿಸಬೇಕು. ಅವರು ಕೆಲವು ಸಂದರ್ಭಗಳಲ್ಲಿ ನಾವು ಹೆಚ್ಚು ಸಮಯ ಕೆಲಸ ಮಾಡಿದರೆ, ನಮಗೆ ಅಧಿಕ ಸಮಯದ ವೇತನವನ್ನು ನೀಡಬೇಕು. ನಿಗದಿತ ಕೆಲಸದ ಸಮಯವನ್ನು ನೀಡಬೇಕು

**ದುಡಿಯುತ್ತಿರುವ ಹದಿಹರೆಯದವರಿಂದ ಹಕ್ಕೊತ್ತಾಯ – ಭಾರತ**

<u>ರಾಷ್ಟ್ರೀಯ ಬಾಲ ಕಾರ್ಮಿಕರ ದಿನವಾದ ಏಪ್ರಿಲ್ 30 2021 ರ ಅಂಗವಾಗಿ</u>
<u>ರಾಜ್ಯ ಹಾಗು ಕೇಂದ್ರ ಸರ್ಕಾರದಿಂದ ಮಕ್ಕಳ ಸ್ನೇಹಿಯಾದ ಸಮಗ್ರ ಪ್ರತಿಕ್ರಿಯೆಯನ್ನು ಅಪೇಕ್ಷಿಸುತ್ತಿದ್ದೇವೆ</u>
ದಿನಾಂಕ: 26.04.2021

---

- ನಮ್ಮ ಕೆಲಸದ ಸ್ಥಳದಲ್ಲಿ ನಮಗೆ ಉತ್ತಮ ಆಹಾರವನ್ನು ನೀಡಬೇಕು. ಸರಿಯಾದ ಸಮಯಕ್ಕೆ ಊಟವನ್ನು ನೀಡಬೇಕು
- ನಮ್ಮ ಉದ್ಯೋಗಗಳಿಗೆ ಉತ್ತಮವಾಗಿ ತರಬೇತಿ ನೀಡಿದಲ್ಲಿ ನಾವು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತೇವೆ
- ನಮ್ಮ ಉದ್ಯೋಗದಾತರಿಂದ ನಮಗೆ ಹೆದರಿಕೆ ಉಂಟಾಗುವ ಸಂದರ್ಭ ಉಂಟಾಗಬಾರದು. ನಾವು ಏನಾದರೂ ತಪ್ಪು ಮಾಡಿದರೆ, ಉದ್ಯೋಗದಾತರು ನಮಗೆ ತಿಳುವಳಿಕೆ ಹೇಳಬೇಕು, ನಮ್ಮ ಮೇಲೆ ಕೂಗಾಡಬಾರದು ಅಥವಾ ನಮ್ಮನ್ನು ಪೀಡಿಸಬಾರದು. ಸರ್ಕಾರ ಹಾಗು ನಮ್ಮೊಂದಿಗೆ ಕೆಲಸ ಮಾಡುವ ಸಂಸ್ಥೆಗಳು ಹದಿಹರೆಯದವರಿಗೆ ಸುರಕ್ಷಿತ ಕೆಲಸಕ್ಕಾಗಿ ನಿಗದಿಪಡಿಸಿದ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ಉದ್ಯೋಗದಾತರು ಪಾಲಿಸುವಂತೆ ನೋಡಿಕೊಳ್ಳಬೇಕು
- ನಮಗೆ ಸಂಬಳವನ್ನು ನೀಡುವಾಗ ಅವರು ಲಿಂಗಗಳ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡಬಾರದು. ಹುಡುಗರಿಗಿಂತ ಹುಡುಗಿಯರು ಕಡಿಮೆ ಕೂಲಿಯನ್ನು ಪಡೆಯುತ್ತಿದ್ದಾರೆ. ಇದು ಸರಿಯಲ್ಲ. ಎಲ್ಲಾ ಹದಿಹರೆಯದವರಿಗೆ ಒಂದೇ ರೀತಿಯ ವೇತನವನ್ನು ನೀಡಬೇಕು. ನಾವು ಇತರ ವಯಸ್ಕರಂತೆ ಕೆಲಸ ಮಾಡುತ್ತಿದ್ದರೆ, ಅಲ್ಲಿಯೂ ನಾವು ವೇತನ ಸಮಾನತೆಯನ್ನು ಹೊಂದಿರಬೇಕು

**ವೃತ್ತಿಪರ ತರಬೇತಿ ಮತ್ತು ಶಿಕ್ಷಣ:**

- ಹದಿಹರೆಯದವರಿಗೆ ಮತ್ತು ಯುವಕರಿಗೆ ಸುರಕ್ಷಿತ ಉದ್ಯೋಗಗಳಲ್ಲಿ ಸರ್ಕಾರವು ವೃತ್ತಿಪರ ತರಬೇತಿ ಹಾಗು ಸ್ವ-ಉದ್ಯೋಗ ಅವಕಾಶಗಳನ್ನು ಒದಗಿಸಬೇಕು, ಉದಾಹರಣೆಗೆ ಟೈಲರಿಂಗ್, ಬ್ಯೂಟಿಷಿಯನ್ ಮತ್ತು ಮನೆಯಲ್ಲಿ ಸಣ್ಣ ಉತ್ಪನ್ನಗಳನ್ನು ತಯಾರಿಸುವುದು ಇತ್ಯಾದಿ. ನಂತರ ನಾವು ಸ್ವಯಂ ಉದ್ಯೋಗಿಗಳಾಗಬಹುದು, ನಮಗಾಗಿ ಜೀವನವನ್ನು ರೂಪಿಸಿಕೊಳ್ಳಬಹುದು ಮತ್ತು ನಮ್ಮ ಕುಟುಂಬಗಳಿಗೆ ಆಧಾರವಾಗಬಹುದು
- ಪ್ರಸ್ತುತ ಸಂದರ್ಭದಲ್ಲಿ ವೃತ್ತಿಪರ ತರಬೇತಿ ಅವಕಾಶಗಳು, ಕೌಶಲ್ಯ ತರಬೇತಿ ಮತ್ತು ಕಾರ್ಮಿಕತೆಯ ತರಬೇತಿ ಆಯ್ಕೆಗಳನ್ನು ಮಾತ್ರ ಒಳಗೊಂಡಿರುತ್ತವೆ. ಇವು ದೇಶದ ಆರ್ಥಿಕ ಬೆಳವಣಿಗೆಗೆ ಪರಿಣಾಮಕಾರಿಯಾಗಿ ಕೊಡುಗೆ ನೀಡುವುದಿಲ್ಲ. ಆದ್ದರಿಂದ ವೃತ್ತಿಪರ ತರಬೇತಿ ಆಯ್ಕೆಗಳ ವ್ಯಾಪ್ತಿಯನ್ನು ವಿಸ್ತರಿಸಬೇಕು
- ಸರ್ಕಾರ ವೃತ್ತಿಪರ ತರಬೇತಿ ಕೇಂದ್ರಗಳನ್ನು ನಿರ್ಮಿಸಿದಲ್ಲಿ ಅಲ್ಲಿ ನಾವು ತರಬೇತಿಯನ್ನು ಉಚಿತವಾಗಿ ಪಡೆಯಬಹುದು – ವಿಶೇಷವಾಗಿ ತೀವ್ರ ತೊಂದರೆಗಳನ್ನು ಎದುರಿಸುತ್ತಿರುವ ಹದಿಹರೆಯದವರಿಗೆ ಬಹಳ ಉಪಯುಕ್ತವಾಗುತ್ತದೆ. 10 ನೇ ತರಗತಿಯ ನಂತರ, ವೃತ್ತಿಪರ ತರಬೇತಿಯನ್ನು ಆಯ್ಕೆ ಮಾಡಿಕೊಳ್ಳಲು ನಮಗೆ ಅವಕಾಶಗಳು ಇರಬೇಕು ಹಾಗು ಇವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ತರಬೇತಿ ಅವಧಿಯಲ್ಲಿ ವಿದ್ಯಾರ್ಥಿ ವೇತನ / ಅನುದಾನ ನೀಡಿದಲ್ಲಿ ಅವರಿಗೆ ಸಹಾಯವಾಗಿರುತ್ತದೆ
- ಈ ತರಬೇತಿ ಅವಕಾಶಗಳನ್ನು ಲಿಂಗದ ಆಧಾರದ ಮೇಲೆ ವಿನ್ಯಾಸಗೊಳಿಸಬಾರದು. ಬದಲಾಗಿ, ಎಲ್ಲಾ ಲಿಂಗಗಳ ಹದಿಹರೆಯದವರಿಗೆ ಅವರ ಆಸಕ್ತಿ, ಆಕಾಂಕ್ಷೆಗಳು ಮತ್ತು ಸಾಮರ್ಥ್ಯಗಳ ಆಧಾರದ ಮೇಲೆ ವೃತ್ತಿಯನ್ನು ಮುಂದುವರಿಸಲು ಅವಕಾಶಗಳನ್ನು ಒದಗಿಸಬೇಕು
- ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ (ಎನ್.ಐ.ಓ.ಎಸ್) ವೃತ್ತಿಪರ ಶಿಕ್ಷಣವನ್ನು ನೀಡುತ್ತದೆ. ಅದರ ಶುಲ್ಕ ನಮಗೆ ಭರಿಸಲಾಗದಷ್ಟು ಹೆಚ್ಚಾಗಿದೆ. ಬಿ.ಪಿ.ಎಲ್ ಕುಟುಂಬಗಳಿಂದ ಮಕ್ಕಳು ಮತ್ತು ಹದಿಹರೆಯದವರಿಗೆ ಇದನ್ನು ಕಡಿಮೆ ಮಾಡಬೇಕಾಗಿದೆ. ಸಮಾಜ ಕಲ್ಯಾಣ ಮಂತ್ರಾಲಯವು ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು ನೀಡುತ್ತಿರುವ ವೇತನದ ಮಾದರಿಯಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಇತರ ಬದಿಗೊತ್ತಲ್ಪಟ್ಟ ಸಮುದಾಯಗಳಿಗೆ ವೃತ್ತಿಪರ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನವನ್ನು ನೀಡಬೇಕು. ನಾವು ಎನ್.ಐ.ಓ.ಎಸ್ ಅಡಿಯಲ್ಲಿ ಪೂರ್ಣಗೊಳಿಸಿದ ವೃತ್ತಿಪರ ಶಿಕ್ಷಣಕ್ಕಾಗಿ ಪ್ರಮಾಣೀಕರಣದ ಅಗತ್ಯವಿದೆ. ಈಗಿನಂತೆ ನಾವು ಪ್ರಮಾಣೀಕರಣಕ್ಕಾಗಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಆದರೆ ಈ ಪರೀಕ್ಷೆಯನ್ನು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರ ತೆಗೆದುಕೊಳ್ಳುವ ಅವಕಾಶವಿದೆ. ಈ ಎರಡು ಭಾಷೆಗಳನ್ನು ತಿಳಿದಿಲ್ಲದ ನಮ್ಮೆಲ್ಲರನ್ನೂ ಹೊರತು ಪಡಿಸುತ್ತದೆ. ಆದ್ದರಿಂದ

ಎನ್.ಐ.ಓ.ಎಸ್ ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಪಠ್ಯ ಪುಸ್ತಕಗಳನ್ನು ಬಿಡುಗಡೆಗೊಳಿಸಬೇಕು ಮತ್ತು ನಮ್ಮದೇ ಪ್ರಾದೇಶಿಕ ಭಾಷೆಯಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳುವ ಸೌಲಭ್ಯವನ್ನು ಸಹ ಒದಗಿಸಬೇಕು

- ಕೆಲವು ಮಕ್ಕಳಿಗೆ, ವಿಶೇಷವಾಗಿ ಹುಡುಗಿಯರಿಗೆ, ಹತ್ತಿರದಲ್ಲಿರುವ ಶಾಲೆಗಳಲ್ಲಿ ವೃತ್ತಿಪರ ಶಿಕ್ಷಣವನ್ನು ಒದಗಿಸಬೇಕು ಏಕೆಂದರೆ ಅವರಲ್ಲಿ ಅನೇಕರಿಗೆ, ಅವರ ಕುಟುಂಬದವರಿಂದ ದೂರ ಬೇರೆ ಊರಿಗೆ ಹೋಗಲು ಅನುಮತಿಸುವುದಿಲ್ಲ
- ನಮ್ಮಲ್ಲಿ ಯಾರಾದರೂ ವೃತ್ತಿಪರ ಶಿಕ್ಷಣದ ಜೊತೆಗೆ ಶೈಕ್ಷಣಿಕ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕಾದರೆ, ನಮಗೆ ಬೆಂಬಲ, ಪರಿಹಾರ ಬೋಧನೆ ಮತ್ತು ಮಾರ್ಗದರ್ಶನದ ಅಗತ್ಯವಿದೆ

**ಶಿಕ್ಷಣ:**

- ನಮ್ಮಲ್ಲಿ ಕೆಲವು ಮಕ್ಕಳು ಮತ್ತು ಹದಿಹರೆಯದವರು:
  - ಶಾಲೆಗೆ ಹೋಗದೆಯೇ ಇರುವವರು;
  - ಕೋವಿಡ್ – 19 ಸಂಭವಿಸುವವರೆಗೂ ಶಾಲೆಯಲ್ಲಿದ್ದು ಈಗ ಶಾಲೆಗೆ ಮರಳಲು ಸಾಧ್ಯವಾಗದವರು;
  - ನಮ್ಮ ಶಿಕ್ಷಣದ ಸಲುವಾಗಿ ದುಡಿಯುವವರು ಸೇರಿದಂತೆ ದುಡಿಮೆ ಮಾಡುತ್ತ ಶಿಕ್ಷಣವನ್ನು ಮುಂದುವರಿಸುತ್ತಿರುವವರು;
  - ವೃತ್ತಿಪರ ತರಬೇತಿ ಪಡೆಯಲು ಬಯಸುವವರು;
  - ಸುರಕ್ಷಿತ ಕೆಲಸದ ಆಯ್ಕೆಗಳು ಮತ್ತು ಉದ್ಯೋಗ ಶಿಕ್ಷಣದ ಅಗತ್ಯವಿರುವವರು – ಏಕಕಾಲದಲ್ಲಿ ಗಳಿಸಲು ಮತ್ತು ಕೆಲಸ ಮಾಡುತ್ತಾ ಸಂಬಳವನ್ನು ಪಡೆಯಲು ಇಚ್ಛಿಸುವವರು
- ನಮ್ಮ ಅಗತ್ಯಗಳು ವಿಭಿನ್ನವಾಗಿರುವುದರಿಂದ ಪ್ರತಿಯೊಂದು ಗುಂಪುಗಳಿಗೆ ಸರ್ಕಾರವು ವಿಶಿಷ್ಟವಾದ ಯೋಜನೆಗಳನ್ನು ಹೊಂದಿರಬೇಕು. ನಮ್ಮೆಲ್ಲರ ವೈವಿಧ್ಯಮಯ ಆಸಕ್ತಿಗಳು, ಸಾಮರ್ಥ್ಯಗಳ ಬಗ್ಗೆ ಹಾಗು ಕಷ್ಟಕರವಾದ ಸನ್ನಿವೇಶಗಳ ಬಗ್ಗೆ ಸರ್ಕಾರಕ್ಕೆ ಆಳವಾದ ತಿಳುವಳಿಕೆ ಇರಬೇಕು. ಶಿಕ್ಷಣದಲ್ಲಿ ನಾವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳು ನಮಗೆ ಸರಿಹೊಂದುವಂತೆ ಇರಬೇಕು. ನಮಗೆಲ್ಲರಿಗೂ ಶೈಕ್ಷಣಿಕ ಅಥವಾ ವೃತ್ತಿಪರ ಶಿಕ್ಷಣದ ಜೊತೆಗೆ ನಮ್ಮ ಹಕ್ಕುಗಳು, ನಮ್ಮ ಶರೀರ, ಮತ್ತು ನಮ್ಮ ಜೀವನದ ಬಗ್ಗೆ ನಮಗೆ ಮಾಹಿತಿ ಬೇಕು
- ಉತ್ತಮ ಶಿಕ್ಷಣವು ಒಳ್ಳೆಯ ಜೀವನವನ್ನು ನಡೆಸಲು ಹೆಚ್ಚಿನ ಅವಕಾಶಗಳನ್ನು ನೀಡುತ್ತದೆ ಎಂದು ನಾವು ಗುರುತಿಸುತ್ತೇವೆ. ಅದೇ ಸಮಯದಲ್ಲಿ, ನಮ್ಮಲ್ಲಿ ಅನೇಕರು ವಿದ್ಯಾಭ್ಯಾಸವನ್ನು ಸುಲಭವಾಗಿ ಅಥವಾ ಉಪಯುಕ್ತವಾಗಿ ಪಡೆದುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಸರ್ಕಾರವು ಗುರುತಿಸಬೇಕಾಗಿದೆ ಹಾಗು ಅದಕ್ಕೆ ಕಾರಣಗಳನ್ನು ಸಹ ಗಮನಿಸಬೇಕು
- ನಮ್ಮಲ್ಲಿ ಅನೇಕರು 'ಕಲಿಕೆ ಮತ್ತು ಸಂಪಾದನೆ'ಯನ್ನು ಜೊತೆಜೊತೆಯಾಗಿ ಮಾಡಲು ಬಯಸುತ್ತೇವೆ, ಇದರಿಂದಾಗಿ ನಾವು ಬದುಕನ್ನು ನಡೆಸುವುದರೊಂದಿಗೆ, ಹಕ್ಕುಗಳ ಬಗ್ಗೆ, ಕೆಲಸದ ಬಗ್ಗೆ ಇತ್ಯಾದಿ ವಿಷಯಗಳನ್ನು ಕಲಿಯುವ ಅವಕಾಶ ಮುಂದುವರಿಯಬಹುದು
- ಹೊಸ ಶಿಕ್ಷಣ ನೀತಿಯು ಅನೇಕ ಉತ್ತಮ ಸಲಹೆಗಳನ್ನು ಹೊಂದಿದ್ದರೂ, ಇದು ಬಡ ಮಕ್ಕಳನ್ನು ಚಿಕ್ಕ ವಯಸ್ಸಿನಿಂದಲೇ ವೃತ್ತಿಪರ ಶಿಕ್ಷಣದತ್ತ ಸೆಳೆಯಬಹುದು ಹಾಗು ಶ್ರೀಮಂತ ಕುಟುಂಬಗಳ ಮಕ್ಕಳು ಶಾಲಾ ಶಿಕ್ಷಣವನ್ನು ಪಡೆದುಕೊಳ್ಳುತ್ತಾರೆ. ಇದರಿಂದ ತಾರತಮ್ಯ ಉಂಟಾಗುತ್ತದೆ. ವೃತ್ತಿಪರ ತರಬೇತಿಯನ್ನು ಪಡೆದುಕೊಳ್ಳುವುದು ಉನ್ನತ ಶಿಕ್ಷಣವನ್ನು ಆಯ್ಕೆ ಮಾಡುವ ದಾರಿಗೆ ಅಡ್ಡವಾಗಿ ಬರಬಾರದು – ನಮ್ಮಲ್ಲಿ ಕೆಲವರು ಇದನ್ನು ಮಾಡಲು ಬಯಸುತ್ತಾರೆ
- ಬಡ ಕುಟುಂಬಗಳಿಂದ, ಏಕ ಪೋಷಕ ಕುಟುಂಬಗಳಿಂದ, ವಲಸೆ ಸಮುದಾಯಗಳಿಂದ ಮಕ್ಕಳಿಗೆ ಸರ್ಕಾರವು ಉಚಿತ ಶಿಕ್ಷಣ ಮತ್ತು ಪರಿಹಾರ ತರಬೇತಿಯನ್ನು ನೀಡಬೇಕು. ಇದು ಮೂಲಭೂತ ಹಕ್ಕು ಆಗಿರುವುದರಿಂದ ಎಲ್ಲಾ ಮಕ್ಕಳು ಉಚಿತ ಶಿಕ್ಷಣವನ್ನು ಹೊಂದಿರಬೇಕು ಎಂದು ನಮ್ಮಲ್ಲಿ ಕೆಲವರು ಭಾವಿಸುತ್ತಾರೆ

**ದುಡಿಯುತ್ತಿರುವ ಹದಿಹರೆಯದವರಿಂದ ಹಕ್ಕೊತ್ತಾಯ – ಭಾರತ**

<u>ರಾಷ್ಟ್ರೀಯ ಬಾಲ ಕಾರ್ಮಿಕರ ದಿನವಾದ ಏಪ್ರಿಲ್ 30 2021 ರ ಅಂಗವಾಗಿ</u>
<u>ರಾಜ್ಯ ಹಾಗು ಕೇಂದ್ರ ಸರ್ಕಾರದಿಂದ ಮಕ್ಕಳ ಸ್ನೇಹಿಯಾದ ಸಮಗ್ರ ಪ್ರತಿಕ್ರಿಯೆಯನ್ನು ಅಪೇಕ್ಷಿಸುತ್ತಿದ್ದೇವೆ</u>
ದಿನಾಂಕ: 26.04.2021

---

- ಸರ್ಕಾರಿ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಬೇಕು. ಶಿಕ್ಷಕರು ತಮ್ಮ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಲು ತರಬೇತಿ ನೀಡಬೇಕು. 30: 1 ರ ವಿದ್ಯಾರ್ಥಿ–ಶಿಕ್ಷಕರ ಅನುಪಾತವನ್ನು ಕಟ್ಟುನಿಟ್ಟಾಗಿ ಖಚಿತಪಡಿಸಬೇಕು
- ಸಂಜೆ ಪ್ರೌಢ ಶಾಲೆಗಳು, ದೂರದ ಕಲಿಕಾ ಶಾಲೆಗಳು, ಅಲ್ಪಾವಧಿಯ ಶಿಕ್ಷಣ ಕೋರ್ಸ್‌ಗಳು ಮತ್ತು ಇಂತಹ ಇತರ ವ್ಯವಸ್ಥೆಗಳೊಂದಿಗೆ 'ಸಂಪಾದನೆ–ಕಲಿಕೆ' ಕಾರ್ಯಕ್ರಮಗಳು ಯುವಜನರಿಗೆ ಕಲಿಯಲು ಮತ್ತು ಹಣವನ್ನು ಸಂಪಾದಿಸಲು ಬಹಳ ಮುಖ್ಯ. ನಮ್ಮಲ್ಲಿ ಕೆಲವರಿಗೆ ಶಿಕ್ಷಣವನ್ನು ಮುಂದುವರೆಸಲು ಇದು ಏಕೈಕ ಮಾರ್ಗವಾಗಿದೆ
- ವಲಸೆ ಸಮುದಾಯಗಳಿಂದ ಹಾಸ್ಟೆಲ್ ಸೌಲಭ್ಯಗಳನ್ನು ಒದಗಿಸುವುದು, ವಿದ್ಯಾರ್ಥಿ ವೇತನ ನೀಡುವುದು, ಶುಲ್ಕ ಮನ್ನಾ ಮಾಡುವುದು ಮತ್ತು ಶಾಲೆಗೆ ಸಂಬಂಧಿಸಿದ ಎಲ್ಲಾ ಇತರ ವೆಚ್ಚಗಳಿಗೆ ಬೆಂಬಲ ಸೇರಿದಂತೆ ನಮ್ಮ ಶಿಕ್ಷಣವನ್ನು ಮುಂದುವರಿಸಲು ಸರ್ಕಾರವು ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಬೇಕು
- ನಮ್ಮ ಸಮುದಾಯಗಳ ಬಗ್ಗೆ ಶಾಲೆಗಳಲ್ಲಿ ಶಿಕ್ಷಕರಿಂದ ಯಾವುದೇ ಅವಹೇಳನಕಾರಿ ಮಾತುಗಳನ್ನು ಅನುಮತಿ ನೀಡಬಾರದು
- ನಾವು ಶಾಲೆಗಳಲ್ಲಿ ಯಾವುದೇ ದೈಹಿಕ ಶಿಕ್ಷೆ ಅಥವಾ ದೌರ್ಜನ್ಯವನ್ನು ಎದುರಿಸಬಾರದು. ಉತ್ತಮವಾಗಿ ಕಲಿಯಲು ನಮಗೆ ಹೇಗೆ ಸಹಾಯ ಮಾಡುವುದು ಮತ್ತು ಕಲಿಸಲಾಗುತ್ತಿರುವದನ್ನು ನಮಗೆ ಹೇಗೆ ಅರ್ಥಮಾಡಿಕೊಳ್ಳುವುದು ಎಂಬುದರ ಬಗ್ಗೆ ಸರ್ಕಾರ ಗಮನ ನೀಡಬೇಕು.
- ಮೊಬೈಲ್‌ನಲ್ಲಿ ಆನ್‌ಲೈನ್ ಬೋಧನೆ ನಮಗೆ ಅರ್ಥವಾಗುತ್ತಿಲ್ಲ. ಆನ್‌ಲೈನ್ ಶಿಕ್ಷಣವು ಸ್ವಲ್ಪ ಸಮಯದವರೆಗೆ ಮುಂದುವರಿಯಬೇಕಾದರೆ, ಅದನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವಂತೆ ಇಂಟರ್ನೆಟ್ ವ್ಯವಸ್ಥೆ, ಮೊಬೈಲ್ ಫೋನ್ ಮತ್ತು ಉತ್ತಮ ನೆಟ್‌ವರ್ಕ್ ಸಂಪರ್ಕವನ್ನು ಒದಗಿಸಬೇಕು. ಆದರೆ ಇದು ದೀರ್ಘಾವಧಿಯಲ್ಲಿ ನಡೆಯುವುದಿಲ್ಲ. ಶಾಲೆಗಳನ್ನು ನಮ್ಮ ಸಮುದಾಯಗಳಲ್ಲಿ ಸಿಗುವಂತೆ ಮಾಡಬೇಕು. ನಮಗೆ ಅಧ್ಯಯನಕ್ಕೆ ಸಹಾಯ ಸಿಗದಿದ್ದರೆ, ನಮ್ಮಲ್ಲಿ ಹೆಚ್ಚಿನವರು ಶಾಲೆಯನ್ನು ಸಂಪೂರ್ಣವಾಗಿ ಬಿಟ್ಟು ಕೆಲಸಕ್ಕೆ ಸೇರುತ್ತಾರೆ.
- ಶೈಕ್ಷಣಿಕ ಮತ್ತು ವೃತ್ತಿಪರ ಶಿಕ್ಷಣಕ್ಕಾಗಿ ಯುವಜನರು ನಮಗೆ ಲಭ್ಯವಿರುವ ವಿವಿಧ ಅವಕಾಶಗಳ ಬಗ್ಗೆ ಮಾಹಿತಿಯನ್ನು ಹಂಚುವುದನ್ನು ಸ್ಥಳೀಯ ಸರ್ಕಾರ ಖಚಿತಪಡಿಸಿಕೊಳ್ಳಬೇಕು

**ಯುವಕರಿಗೆ ಮತ್ತು ನಮ್ಮ ಕುಟುಂಬಗಳಿಗೆ ಜೀವನೋಪಾಯ:**

- ನಮ್ಮ ವಯಸ್ಕರಿಗೆ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಯಾಗಬೇಕು ಮತ್ತು ಅವುಗಳು ನಮ್ಮ ಎಲ್ಲಾ ಮೂಲಭೂತ ಅಗತ್ಯಗಳನ್ನು ಪೂರೈಸಲು ಸಾಕಷ್ಟು ವೇತನವನ್ನು ನೀಡಬೇಕು – ಇದರಿಂದಾಗಿ ನಮ್ಮ ಕುಟುಂಬಗಳಲ್ಲಿನ ಮಕ್ಕಳು ಬದುಕುಳಿಯಲು ಕೆಲಸ ಮಾಡಲು ಒತ್ತಾಯಿಸುವ ಸಂದರ್ಭ ಇರುವುದಿಲ್ಲ
- ನಮ್ಮ ಕುಟುಂಬಗಳು ಕರಕುಶಲ ವಸ್ತುಗಳು ಮತ್ತು ಗೃಹಾಧಾರಿತ ಉತ್ಪನ್ನಗಳನ್ನು ಉತ್ಪಾದಿಸುತ್ತಾರೆ. ಸರ್ಕಾರವು ಅವುಗಳ ಮಾರಾಟಕ್ಕೆ ಮಾರುಕಟ್ಟೆಯನ್ನು ಸೃಷ್ಟಿಸಬೇಕು. ಇದು ನಮ್ಮ ಕುಟುಂಬಗಳಿಗೆ ಮತ್ತು ನಮ್ಮ ಇಡೀ ಸಮುದಾಯಕ್ಕೆ ಸಹಾಯ ಮಾಡುತ್ತದೆ.
- ನಮ್ಮಲ್ಲಿ ಅನೇಕರು ಉದ್ಯೋಗ ಅಥವಾ ಕೆಲಸವನ್ನು ತೆಗೆದುಕೊಳ್ಳಲು ಬಡತನವೇ ಮೂಲ ಕಾರಣವಾಗಿದೆ. ಆದ್ದರಿಂದ, ಶಿಕ್ಷಣವನ್ನು ಮುಂದುವರಿಸಲು ಬಡತನವನ್ನು ಹೋಗಲಾಡಿಸಲು ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಹೊಂದಿರಬೇಕು.
- ಕೆಲವು ಕುಟುಂಬಗಳಲ್ಲಿ ಮಕ್ಕಳು ಮತ್ತು ಪೋಷಕರು ಇಬ್ಬರೂ ಕೆಲಸ ಮಾಡುತ್ತಿದ್ದಾರೆ ಆದರೆ ಆದಾಯವು ಸಾಕಾಗುವುದಿಲ್ಲ. ನಿರುದ್ಯೋಗ ಮತ್ತು ಕಡಿಮೆ ವೇತನದ ಸಮಸ್ಯೆಯನ್ನು ತಕ್ಷಣ ಮತ್ತು ಸತತವಾಗಿ ಪರಿಹರಿಸಬೇಕು. ನಮ್ಮ ವಯಸ್ಕರಿಗೆ ಉತ್ತಮ ಉದ್ಯೋಗಗಳನ್ನು ಒದಗಿಸಬೇಕು ಮತ್ತು ಈ ಉದ್ಯೋಗಗಳು ಕುಟುಂಬದ ಉಳಿವಿಗಾಗಿ ಉತ್ತಮ ಆದಾಯವನ್ನು ನೀಡಬೇಕು

- ಶಿಕ್ಷಣ ಅಥವಾ ವೃತ್ತಿಪರ ಶಿಕ್ಷಣವನ್ನು ಪಡೆಯಲು ಸಾಧ್ಯವಾದರೆ, ಯುವಜನರು ದುಡಿಮೆಯನ್ನು ಆಯ್ಕೆ ಮಾಡದಿರಲು ಪೋಷಕರಿಗೆ ಆಪ್ತಸಮಾಲೋಚನೆ ನೀಡಬೇಕು

**ಅನಧಿಸೂಚಿತ ಬುಡಕಟ್ಟು ಸಮುದಾಯಗಳ (ಡಿ.ಎನ್.ಟಿ) ಮಕ್ಕಳ ರಕ್ಷಣೆಗಾಗಿ ನಿರ್ದಿಷ್ಟವಾದ ಹಕ್ಕೊತ್ತಾಯ:**

- ನಮ್ಮಲ್ಲಿ ಅನಧಿಸೂಚಿತ ಬುಡಕಟ್ಟು ಜನಾಂಗದವರು ಮತ್ತು ಬೀದಿಯಲ್ಲಿ ವಾಸಿಸುವವರು ಪೊಲೀಸ್ ಕಿರುಕುಳಕ್ಕೆ ತುತ್ತಾಗುತ್ತಿದ್ದಾರೆ. ನಮ್ಮಿಂದ ಹಣವನ್ನು ಸುಲಿಗೆ ಮಾಡುವ ಮತ್ತು ನಮಗೆ ಹಿಂಸೆಯನ್ನು ಉಂಟು ಮಾಡುವ ಪೊಲೀಸ್ ಸಿಬ್ಬಂದಿಗೆ ಶಿಕ್ಷೆಯಾಗುವಂತೆ ಸರ್ಕಾರ ಖಚಿತಪಡಿಸಿಕೊಳ್ಳಬೇಕು. ಇಂತಹ ಕಿರುಕುಳಕ್ಕೆ ಒಳಗಾಗುವ ಎಲ್ಲಾ ಮಕ್ಕಳಿಗೆ ಸಂಪೂರ್ಣ ರಕ್ಷಣೆ ನೀಡಬೇಕು
- ನಮಗೆ ಉಂಟಾಗುವ ಸಮಸ್ಯೆಗಳನ್ನು ಪರಿಹರಿಸಲು ಪೊಲೀಸ್ ಇಲಾಖೆಯು ಪ್ರತ್ಯೇಕ ವಿಭಾಗವನ್ನು ಹೊಂದಿರಬೇಕು. ಬಾಲ ನ್ಯಾಯ ಕಾಯ್ದೆಯ ನಿಬಂಧನೆಗಳನ್ನು ಉಲ್ಲಂಘಿಸಲು ಪೊಲೀಸ್ ಸಿಬ್ಬಂದಿಗೆ ಎಂದಿಗೂ ಅನುಮತಿ ನೀಡಬಾರದು. ನಮ್ಮ ಡಿ.ಎನ್.ಟಿ ಗುರುತಿನಿಂದಾಗಿ ನಮ್ಮನ್ನು ತಾರತಮ್ಯ ಮಾಡದಿರುವಂತೆ ಅವುಗಳನ್ನು ಕಟ್ಟುನಿಟ್ಟಾಗಿ ತಡೆಯಬೇಕು.
- ನಮ್ಮ ಪಾರ್ಧಿಗಳು / ಕಾಂಜಾರ್‌ಗಳು ಮತ್ತು ಇತರ ಡಿ.ಎನ್.ಟಿ ಗುಂಪುಗಳ ವ್ಯಾಪ್ತಿಯಲ್ಲಿ ಇರುವ ಪೊಲೀಸ್ ಠಾಣೆಗಳಲ್ಲಿ ಆರಕ್ಷಕರಿಗೆ ವಿಶೇಷ ತರಬೇತಿ ನೀಡಬೇಕು.
- ಸಮಾಜದಲ್ಲಿ ಡಿ.ಎನ್.ಟಿಗಳ ಬಗ್ಗೆ ಸಕಾರಾತ್ಮಕ ಸಂದೇಶ ಸಾರುವುದರಿಂದ ನಮ್ಮ ಘನತೆಯನ್ನು ಎತ್ತಿ ಹಿಡಿಯಬೇಕು. ಪ್ರಸ್ತುತ ಸಂದರ್ಭದಲ್ಲಿ ನಮ್ಮ ಸಮುದಾಯದ ಕುರಿತು ಮಾಧ್ಯಮಗಳಲ್ಲಿರುವ ನಕಾರಾತ್ಮಕ ಚಿತ್ರಣವನ್ನು ನಾವು ಒಪ್ಪುವುದಿಲ್ಲ. ನಮ್ಮ ಸಮುದಾಯದ ಒಂದೆರಡು ಸದಸ್ಯರನ್ನು ಬಂಧಿಸಿದರೂ, ಪತ್ರಿಕೆಗಳು ಅವರನ್ನು ನಮ್ಮ ಇಡೀ ಸಮುದಾಯವನ್ನು ಸೂಚಿಸುವ 'ಕಾಂಜರ್ ಗ್ಯಾಂಗ್' ಅಥವಾ 'ಪಾರ್ಧಿ ಗ್ಯಾಂಗ್' ಎಂದು ಉಲ್ಲೇಖಿಸುತ್ತವೆ! ಇದು ನಿರ್ದಯ ತಾರತಮ್ಯ ಮತ್ತು ಅಪಪ್ರಚಾರ ಆದುದರಿಂದ ಇದನ್ನು ನಾವು ಖಂಡಿಸುತ್ತೇವೆ
- ಮನೆಗಳಲ್ಲಿ ಮದ್ಯ ತಯಾರಿಸುವ ಡಿಎನ್‌ಟಿ ಸಮುದಾಯಗಳಿಗೆ ಪರವಾನಗಿ ನೀಡಬೇಕು ಮತ್ತು ಈ ಕೆಲಸದಿಂದಾಗಿ ನಮ್ಮ ಸಮುದಾಯದವರು ಪೊಲೀಸರ ಕಿರುಕುಳ ಮತ್ತು ಶೋಷಣೆಗೆ ಒಳಗಾಗಬಾರದು
- ನಮ್ಮ ಪೋಷಕರಿಗೆ ಈಗಾಗಲೇ ಅವರಿಗಿರುವ ಕೌಶಲ್ಯಗಳ ಆಧಾರದ ಮೇಲೆ ಅವರಿಗೆ ಉದ್ಯೋಗವನ್ನು ನೀಡಬೇಕು.
- ನಮ್ಮ ಸಮುದಾಯದೊಳಗಿನ ಪೌರಕಾರ್ಮಿಕರನ್ನು ಈಗ ನೋಡುತ್ತಿರುವ ಹಾಗೆ ಅನುಮಾನದಿಂದ ನೋಡಬಾರದು. ಅಗತ್ಯವಿದ್ದರೆ ಕೌಶಲ್ಯ ನವೀಕರಣದೊಂದಿಗೆ ಅವರಿಗೆ ಮಹಾನಗರ ಪಾಲಿಕೆಯಲ್ಲಿ ಉದ್ಯೋಗ ನೀಡಬಹುದು
- ಡಿಎನ್‌ಟಿ ಸಮುದಾಯದ ಎಲ್ಲ ಮಕ್ಕಳಿಗೆ ಡಿ.ಎನ್.ಟಿ ಜಾತಿ ಪ್ರಮಾಣಪತ್ರಗಳನ್ನು ಒದಗಿಸಬೇಕು ಇದರಿಂದ ನಮಗೆ ಅರ್ಹವಾದ ಅವಕಾಶಗಳನ್ನು ನಾವು ಪಡೆಯಬಹುದು
- ನಮ್ಮ ಸಮುದಾಯಗಳಲ್ಲಿ ಶಿಕ್ಷಣದ ಮೌಲ್ಯವನ್ನು ಉತ್ತೇಜಿಸಲು ಮತ್ತು ಬಾಲ ಕಾರ್ಮಿಕ ಪದ್ಧತಿಯ ಮೇಲೆ ಹೆಚ್ಚಿನ ಅವಲಂಬನೆಯನ್ನು ತಡೆಯಲು ಅಗತ್ಯವಿದ್ದಷ್ಟು ವಿದ್ಯಾರ್ಥಿ ವೇತನವನ್ನು ನೀಡಬೇಕು
- ಈಗ ನಡೆಯುವ ದೌರ್ಜನ್ಯ ಮತ್ತು ತಾರತಮ್ಯವನ್ನು ತಡೆಗಟ್ಟಲು ಡಿಎನ್‌ಟಿ ಇಲಾಖೆ / ಶಿಕ್ಷಣ ಇಲಾಖೆ ನಡೆಸುತ್ತಿರುವ ಡಿಎನ್‌ಟಿ ಹಾಸ್ಟೆಲ್‌ಗಳನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಬೇಕು
- ನಮ್ಮಲ್ಲಿ ಅನೇಕರಿಗೆ ನೀರಿನ ಸೌಲಭ್ಯಗಳು ಮತ್ತು ಭೂಮಿಗಳಿಲ್ಲದ ಕಾರಣ ಮೂಲಸೌಕರ್ಯಗಳನ್ನು ನಮ್ಮ ಸಮುದಾಯಗಳಿಗೆ ನೀಡುವಂತೆ ಸರ್ಕಾರ ಜಾಗ್ರತೆಯಿಂದ ಯೋಜನೆ ಮೂಡಿಸಬೇಕು

**ಆರೋಗ್ಯ:**

**ದುಡಿಯುತ್ತಿರುವ ಹದಿಹರೆಯದವರಿಂದ ಹಕ್ಕೊತ್ತಾಯ – ಭಾರತ**

<u>ರಾಷ್ಟ್ರೀಯ ಬಾಲ ಕಾರ್ಮಿಕರ ದಿನವಾದ ಏಪ್ರಿಲ್ 30 2021 ರ ಅಂಗವಾಗಿ</u>
<u>ರಾಜ್ಯ ಹಾಗು ಕೇಂದ್ರ ಸರ್ಕಾರದಿಂದ ಮಕ್ಕಳ ಸ್ನೇಹಿಯಾದ ಸಮಗ್ರ ಪ್ರತಿಕ್ರಿಯೆಯನ್ನು ಅಪೇಕ್ಷಿಸುತ್ತಿದ್ದೇವೆ</u>
ದಿನಾಂಕ: 26.04.2021

---

- ನಮ್ಮ ಸಮುದಾಯಗಳಿಗೆ ಉತ್ತಮ ಆರೋಗ್ಯ ಒದಗಿಸುವ ಸೌಲಭ್ಯಗಳ ಕೊರತೆಯಿರುವುದರಿಂದ ಸರ್ಕಾರ ಅದನ್ನು ನಮಗೆ ಒದಗಿಸಬೇಕು.
- ನಮ್ಮ ಸುರಕ್ಷಿತ ಕೆಲಸದ ವಾತಾವರಣದ ಭಾಗವಾಗಿ ನಮಗೆ ನಿಯಮಿತವಾಗಿ ವೈದ್ಯಕೀಯ ವಿಮೆ ಮತ್ತು ಆರೋಗ್ಯ ತಪಾಸಣೆ ನಡೆಸಬೇಕು. ಇವುಗಳನ್ನು ಸರ್ಕಾರ ಖಾತ್ರಿಪಡಿಸಿಕೊಳ್ಳಬೇಕು.
- ಕೋವಿಡ್ – 19 ರ ಸಮಯದಲ್ಲಿ, ನಮ್ಮ ಸಮುದಾಯಗಳಿಂದ ಬಂದ ಕೋವಿಡ್ – 19 ಸೋಂಕಿತ ಜನರಿಗೆ ಉತ್ತಮ ಸಾರ್ವಜನಿಕ ವಲಯದ ಆರೋಗ್ಯ ಸೇವೆ ಹಾಗು ಉಚಿತ ಚಿಕಿತ್ಸೆಯನ್ನು ಒದಗಿಸಬೇಕು. ಕೋವಿಡ್ – 19 ಸಾಂಕ್ರಾಮಿಕ ಸಮಯದಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಬೇಕು ಮತ್ತು ಸಣ್ಣ ಮಕ್ಕಳು ಸೇರಿದಂತೆ ಎಲ್ಲರಿಗೂ ಮುಖ ಕವಚಗಳು ಮತ್ತು ಸ್ಯಾನಿಟೈಜರ್‌ಗಳಂತಹ ಸೌಲಭ್ಯಗಳನ್ನು ಒದಗಿಸಬೇಕು
- ಹದಿಹರೆಯದ ಬಾಲಕಿಯರಿಗೆ ಉತ್ತಮ ಪೌಷ್ಟಿಕಾಂಶ, ಸೂಕ್ತ ಆರೋಗ್ಯ ಸೇವೆಗಳು ಹಾಗು ಆಪ್ತಸಮಾಲೋಚನೆ ಪಡೆಯಲು ಯಾವುದೇ ಕಾರ್ಯಕ್ರಮಗಳಿಲ್ಲ. ಅವರಿಗದು ಎಲ್ಲಾ ಸಮುದಾಯಗಳಲ್ಲಿ ಲಭ್ಯವಿರಬೇಕು. ಪ್ರೌಢಾವಸ್ಥೆಗೆ ಒಳಗಾಗುತ್ತಿರುವ ಮತ್ತು ಪ್ರೌಢಾವಸ್ಥೆಯ ದೈಹಿಕ ಮತ್ತು ಮಾನಸಿಕ ಪರಿಣಾಮವನ್ನು ಅನುಭವಿಸುತ್ತಿರುವ ಹದಿಹರೆಯದ ಯುವತಿಯರಿಗೆ ಆಪ್ತಸಮಾಲೋಚನೆ ಮತ್ತು ಮಾರ್ಗದರ್ಶನ ನೀಡಬೇಕು. ಮುಟ್ಟಿನ ಜೊತೆಗೆ ಸ್ಯಾನಿಟರಿ ಪ್ಯಾಡ್ ಪ್ರಾಮುಖ್ಯತೆ ಮತ್ತು ಪ್ರೌಢಾವಸ್ಥೆಯ ಜೊತೆಗೆ ಬರುವ ಭಾವನಾತ್ಮಕ ಏರಿಳಿತಗಳನ್ನು ನಿರ್ವಹಿಸಲು ಮಾರ್ಗದರ್ಶನವನ್ನೂ ಅವರಿಗೆ ನೀಡಬೇಕು. ಮುಟ್ಟಿನ ಹದಿಹರೆಯದ ಹುಡುಗಿಯರಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ಉಚಿತವಾಗಿ ಲಭ್ಯವಾಗುವಂತೆ ಮಾಡಬೇಕು
- ನಮ್ಮಲ್ಲಿ ಕೆಲವರು ತಂಬಾಕು ಮತ್ತು ಮದ್ಯಸೇವನೆಯಿಂದ ಉಂಟಾದ ನಿಂದನೆಯಿಂದ ಡಿ–ಅಡಿಕ್ಷನ್ ಮತ್ತು ಡಿ–ಟಾಕ್ಸಿಫಿಕೇಷನ್ ಬೆಂಬಲವನ್ನು ಬಯಸುತ್ತಾರೆ. ನಮ್ಮ ಸಮುದಾಯಗಳಲ್ಲಿನ ವಯಸ್ಕರಿಗೆ ಇದು ಅಗತ್ಯವಾಗಿರುತ್ತದೆ. ಇದಕ್ಕೆ ಬೆಂಬಲವಾಗಿ ಆಪ್ತಸಮಾಲೋಚನೆ ಮತ್ತು ಆಸ್ಪತ್ರೆ ಸೇವೆಗಳನ್ನು ಉಚಿತವಾಗಿ ನೀಡಬೇಕು

**ಆಹಾರ ಭದ್ರತೆ:**

- ಶಾಲೆಗೆ ಹೋಗುವ ಮಕ್ಕಳು ಮಧ್ಯಾಹ್ನ ಊಟವನ್ನು ಪಡೆಯುತ್ತಾರೆ. ಅದನ್ನು ನೀಡಲು ಸಾಧ್ಯವಾಗದಿದ್ದರೆ, ಅವರಿಗೆ ಕೇವಲ ಪಡಿತರವನ್ನು ನೀಡಲಾಗುತ್ತದೆ. ನಮಗೆ ಊಟವಾಗಲಿ ಪಡಿತರವಾಗಲಿ ಯಾವುವೂ ಸಿಗುತ್ತಿಲ್ಲ. ಕೆಲಸ ಮಾಡುವ ಮಕ್ಕಳು ಮತ್ತು ಹದಿಹರೆಯದವರು ಸಹ ಮಧ್ಯಾಹ್ನದ ಬಿಸಿಯೂಟವನ್ನು ಪಡೆಯುವಂತೆ ಆಗಬೇಕು
- ನಮ್ಮ ಕುಟುಂಬಗಳಿಗೆ ನೀಡಲಾಗುವ ಪಡಿತರ ಸರಬರಾಜು ಸಮರ್ಪಕವಾಗಿಲ್ಲ. ಸರಕುಗಳ ಪ್ರಮಾಣವನ್ನು ಹೆಚ್ಚಿಸಬೇಕು. ನಮಗೆ ಪಡಿತರವನ್ನು ನೀಡಲು ಬಯೋಮೆಟ್ರಿಕ್ಸ್ ಅನ್ನು ಒತ್ತಾಯಿಸಬಾರದು. ತಾಂತ್ರಿಕ ಕಾರಣಗಳಿಂದಾಗಿ ಕೆಲವೊಮ್ಮೆ ಬಯೋಮೆಟ್ರಿಕ್ಸ್ ಹೊಂದಾಣಿಕೆ ಆಗುವುದಿಲ್ಲ ಮತ್ತು ನಮಗೆ ತುರ್ತಾಗಿ ಅಗತ್ಯವಿರುವ ಪಡಿತರವು ನಮಗೆ ದೊರಕುತ್ತಿಲ್ಲ
- ವಸತಿಗಾಗಿ ಕಂತುಗಳನ್ನು ಮನ್ನಾ ಮಾಡಬೇಕು ಏಕೆಂದರೆ ಪ್ರಸ್ತುತ ನಮಗೆ ಆಹಾರವನ್ನು ಸಹ ಪಡೆಯಲು ಸಾಧ್ಯವಾಗುತ್ತಿಲ್ಲ.
- ಅಪೌಷ್ಟಿಕತೆ ಮತ್ತು ರಕ್ತಹೀನತೆಯಿಂದ ಬಳಲುತ್ತಿರುವ ಹದಿಹರೆಯದ ಹುಡುಗಿಯರಿಗೆ ಪೂರಕ ಪೋಷಣೆ ಮತ್ತು ಸಾಕಷ್ಟು ವೈದ್ಯಕೀಯ ಸಹಾಯವನ್ನು ಸರ್ಕಾರ ಒದಗಿಸಲೇಬೇಕು. ಎಲ್ಲಾ ಹದಿಹರೆಯದ ಹುಡುಗಿಯರಿಗೆ ಸರ್ಕಾರ ಉಚಿತ ಪಡಿತರವನ್ನು ನೀಡಬೇಕು.
- ಅಗತ್ಯ ವಸ್ತುಗಳ ಬೆಲೆ ಇಳಿಯುವುದನ್ನು ಸರ್ಕಾರ ಖಾತ್ರಿ ಪಡಿಸಬೇಕು

**ನಕಾರಾತ್ಮಕ ಸಾಮಾಜಿಕ ಪದ್ಧತಿಗಳು:**

**ದುಡಿಯುತ್ತಿರುವ ಹದಿಹರೆಯದವರಿಂದ ಹಕ್ಕೊತ್ತಾಯ – ಭಾರತ**

ರಾಷ್ಟ್ರೀಯ ಬಾಲ ಕಾರ್ಮಿಕರ ದಿನವಾದ ಏಪ್ರಿಲ್ 30 2021 ರ ಅಂಗವಾಗಿ
ರಾಜ್ಯ ಹಾಗು ಕೇಂದ್ರ ಸರ್ಕಾರದಿಂದ ಮಕ್ಕಳ ಸ್ನೇಹಿಯಾದ ಸಮಗ್ರ ಪ್ರತಿಕ್ರಿಯೆಯನ್ನು ಅಪೇಕ್ಷಿಸುತ್ತಿದ್ದೇವೆ
ದಿನಾಂಕ: 26.04.2021

---

- ನಮ್ಮ ಸಮುದಾಯಗಳಲ್ಲಿ ಅಕ್ರಮ ಮದ್ಯ ಮಾರಾಟವನ್ನು ಸರ್ಕಾರ ನಿಲ್ಲಿಸಬೇಕು. ಇದು ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯವು ಹೆಚ್ಚಾಗಲು ಕಾರಣವಾಗುತ್ತದೆ, ಸಮುದಾಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಮಕ್ಕಳು ಮದ್ಯಸೇವನೆಯಿಂದ ಉಂಟಾಗುವ ದೌರ್ಜನ್ಯಕ್ಕೆ ತುತ್ತಾಗುತ್ತಿದ್ದಾರೆ
- ದುಡಿಯುವ ಮಕ್ಕಳು, ಹದಿಹರೆಯದವರು ಮತ್ತು ಬೀದಿಗಳಲ್ಲಿ ವಾಸಿಸುವ ಮತ್ತು ಕೆಲಸ ಮಾಡುವ ಮಕ್ಕಳಲ್ಲಿ ಕಂಡುಬರುತ್ತಿರುವ ಮಾದಕ ವ್ಯಸನವನ್ನು ಸರ್ಕಾರ ತಡೆಯಬೇಕು. ಕೆಲವರು ಮಾದಕ ವಸ್ತುಗಳ ಸೇವನೆಯನ್ನು ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸುವ ಮಾರ್ಗವೆಂದು ಭಾವಿಸುವ ಅನೇಕ ಯುವಕರು ಇದ್ದಾರೆ. ಇಂತಹ ಯುವಕರಿಗೆ ಸಹಾಯದ ತುರ್ತು ಅವಶ್ಯಕತೆಯಿದೆ.
- ಆದರ್ಶ ವಿವಾಹ ಕಾರ್ಯಕ್ರಮವು ಕಾನೂನುಬದ್ಧ ವಿವಾಹದ ವಯಸ್ಸಿಗೆ ಮದುವೆಯಾಗುವ ಯುವಜನರಿಗೆ ಪ್ರೋತ್ಸಾಹ ನೀಡುವ ಯೋಜನೆಯಾಗಿದೆ, ಇದನ್ನು ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೆ ತರಬೇಕು. ಯುವ ದಂಪತಿಗಳಿಗೆ ಸರ್ಕಾರ ನಗದನ್ನು ನೀಡುತ್ತದೆ ಮತ್ತು ಕಡಿಮೆ ವಯಸ್ಸಿನ ವಿವಾಹಗಳು ನಡೆಯುವುದು ಹೀಗೆ ಕಡಿಮೆಯಾಗುತ್ತದೆ. ಯುವಜನರು ಇದರ ಲಾಭ ಪಡೆಂಯುವ ನಿಟ್ಟಿನಲ್ಲಿ ಸ್ಥಳೀಯ ಸರ್ಕಾರವು ಆಯಾ ಪಂಚಾಯಿತಿಗಳು / ವಾರ್ಡ್‌ಗಳಲ್ಲಿ ಜಾಗೃತಿ ಮೂಡಿಸಬೇಕಾಗಿದೆ

**ಆಡಳಿತ:**

- ಮಕ್ಕಳು ಮತ್ತು ಹದಿಹರೆಯದವರನ್ನು 'ಇಂದು ನಾಗರಿಕರು' ಎಂದು ಗುರುತಿಸಬೇಕು
- ಸರ್ಕಾರವು ಕೇವಲ ಕಾನೂನುಗಳನ್ನು ತಿದ್ದುಪಡಿಗೊಳಿಸುವತ್ತ ಗಮನ ಹರಿಸಬಾರದು. ಬದಲಾಗಿ, ಮಕ್ಕಳು ಎದುರಿಸುತ್ತಿರುವ ಕಷ್ಟಕರವಾದ ವಾಸ್ತವತೆಗಳನ್ನು ಬದಲಾಯಿಸುವತ್ತ ಗಮನ ಹರಿಸಬೇಕು
- ಚುನಾವಣೆಯ ಸಮಯದಲ್ಲಿ, ಅಭ್ಯರ್ಥಿಗಳು ಹಣವನ್ನು ನೀಡುತ್ತಾರೆ ಮತ್ತು ಮತಗಳನ್ನು ಕೇಳುತ್ತಾರೆ. ಅಭ್ಯರ್ಥಿಯು ಸಮರ್ಥನೋ ಇಲ್ಲವೋ ಎಂಬುದು ಸಾರ್ವಜನಿಕರಿಗೆ ತಿಳಿದಿರುವುದಿಲ್ಲ. ಅಭ್ಯರ್ಥಿಗಳ ವಿಶ್ವಾಸಾರ್ಹತೆ, ಅವರ ಸಾಮರ್ಥ್ಯ ಮತ್ತು ಕರ್ತವ್ಯಗಳ ಬಗ್ಗೆ ಜಾಗೃತಿಯನ್ನು ಎಲ್ಲಾ ಮತದಾರರಿಗೆ ನೀಡಬೇಕು. ಅವರಿಗೆ ಜವಾಬ್ದಾರಿಯುತವಾಗಿ ಮತ ಚಲಾಯಿಸಲು ಸಹಾಯ ಮಾಡುತ್ತದೆ
- ನಮ್ಮ ಸಮಸ್ಯೆಗಳನ್ನು ಎತ್ತುವ ಸಲುವಾಗಿ ದೃಶ್ಯ ಮಾಧ್ಯಮ, ಪತ್ರಿಕೆ ಮತ್ತು ಇತರ ಅನೇಕ ಮಾಧ್ಯಮಗಳನ್ನು ಬಳಸಲು ನಮ್ಮಂತಹ ಯುವಜನರನ್ನು ಸರ್ಕಾರ ಪ್ರೋತ್ಸಾಹಿಸಬೇಕು

**ಸಹಿಯನ್ನು ಹಾಕಿರುವ ದುಡಿಯುವ ಮಕ್ಕಳ ಸಂಘಟನೆಯ ದೇಶ ಮಟ್ಟದ ಪ್ರತಿನಿಧಿಗಳು:**

| ಕ್ರ. ಸಂ | ಸಂಘಟನೆ | ಸದಸ್ಯರ ಹೆಸರು | ಸೌಕರ್ಯಕಾರಿಕೆ ಒದಗಿಸುತ್ತಿರುವ ಸಂಸ್ಥೆ | ಜಿಲ್ಲೆ ಹಾಗು ರಾಜ್ಯ | ಸೌಕರ್ಯಕಾರಕರು ಸಂಪರ್ಕ ಮಾಹಿತಿ |
|---|---|---|---|---|---|
| 1 | ವುಮೆನ್ಸ್ ವೆಲ್ಫೇರ್ ಅಸೋಸಿಯೇಷನ್ | ಆರತಿ ಮೇಘ್‌ವಾಲ್, | ಮಹಿಳಾ ಜನ ಅಧಿಕಾರ ಸಮಿತಿ (ಎಂ.ಜೆ.ಎ.ಎಸ್) | ಅಜ್ಮೇರ್, ರಾಜಸ್ಥಾನ್ | ಕರುಣ ಫಿಲಿಪ್ 8890870412 |
| 2 | ಬಾಲಕ ನಾಮ | ಕಿಶನ್ | ಚೈಲ್ಡ್‌ಹುಡ್ ಎನ್ಹಾನ್ಸ್‌ಮೆಂಟ್ ಥ್ರೂ ಟ್ರೇನಿಂಗ್ ಆಂಡ್ ಎಜುಕೇಷನ್ (ಚೆತ್ನ) | ಹೊಸ ದೆಹಲಿ | ಇರಮ್ ನಾಜ್ 9711670156 |
| 3 | ಪ್ರಾಜೋಕ್ ಯೂತ್ ಕಲೆಕ್ಟಿವ್ | ಪ್ರೀತಮ್ ಮೊಂಡಲ್ | ಪ್ರಾಜೋಕ್ | ಮುರ್ಶಿದಾಬಾದ್, ಪಶ್ಚಿಮ ಬಂಗಾಳ | ಬಿದಿಶಾ ರೇ ಚೌದರಿ 9874337456 |

**ದುಡಿಯುತ್ತಿರುವ ಹದಿಹರೆಯದವರಿಂದ ಹಕ್ಕೊತ್ತಾಯ – ಭಾರತ**

<u>ರಾಷ್ಟ್ರೀಯ ಬಾಲ ಕಾರ್ಮಿಕರ ದಿನವಾದ ಏಪ್ರಿಲ್ 30 2021 ರ ಅಂಗವಾಗಿ</u>
<u>ರಾಜ್ಯ ಹಾಗು ಕೇಂದ್ರ ಸರ್ಕಾರದಿಂದ ಮಕ್ಕಳ ಸ್ನೇಹಿಯಾದ ಸಮಗ್ರ ಪ್ರತಿಕ್ರಿಯೆಯನ್ನು ಅಪೇಕ್ಷಿಸುತ್ತಿದ್ದೇವೆ</u>
ದಿನಾಂಕ: 26.04.2021

| | | | | | |
|---|---|---|---|---|---|
| 4 | ಬಾಲ್ ಅಧಿಕಾರ್ ಸಂಘರ್ಷ್ ಸಂಘಟನ್ | ಪ್ರಥಮೇಶ್ ಕಾಲೆ | ಯೂತ್ ಫಾರ್ ಯೂನಿಟಿ ಅಂಡ್ ವಾಲಂಟರಿ ಆಕ್ಷನ್ (ಯುವ) | ಮುಂಬೈ, ಮಹಾರಾಷ್ಟ್ರ | ಅಲಿಶಿಯ ಟಾರೊ 9892459833 |
| 5 | ಭೀಮ ಸಂಘ | ಪಿ. ಫಾತಿಮಾಬಿ ಮತ್ತು ಸುಧಾ | ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ (ಸಿಡಬ್ಲ್ಯೂಸಿ) | ವಿಜಯನಗರ ಜಿಲ್ಲೆ, ಕರ್ನಾಟಕ | ಕವಿತಾ ರತ್ನ 9448990480 |
| 6 | ವಿದಿಯಲ್ ಮಕ್ಕಳ ಹಕ್ಕುಗಳ ಆಂದೋಲನ | ರೋಹಿತ್ ಶಕ್ತಿ | ಶಕ್ತಿ – ವಿದಿಯಲ್ | ಮದುರೈ, ತಮಿಳು ನಾಡು | ಡಾ. ಜಿಮ್ ಜೇಸುದೋಸ್ 9443335630 |
| 7 | ಆಝಾದ್ ಜುಗ್ನು ಕ್ಲಬ್ | ಮಹಫೂಜ಼್, ಅರಿನ್, ಸುಮನ್, ಮಂಜ್ನು, ಶ್ರುತಿ ಕುಲ್‌ದೀಶ್ | ಮುಸ್ಕಾನ್ | ಭೋಪಾಲ್, ಮಧ್ಯ ಪ್ರದೇಶ್ | ಶಿವಾನಿ 9425600382 |
| 8 | ತರುಣ ಸೇನ, ಗುಜರಾತ್ ಯುವ ಮಂಚ್ | ಅಸ್ಮಿತ, | ಶೈಶವ್ | ಭಾವನಗರ್, ಗುಜರಾತ್ | ಪಾರುಲ್ ಶೆತ್ 9725030123 |